ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ಕಲಂ 109ರಡಿ ಸಂಘ ಸಂಸ್ಥೆಗಳು ಜಮೀನು ಹೊಂದಬೇಕಾಗಿದ್ದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ : ಸಂವ್ಯಶಾಇ 47 ಶಾಸನ 2001 ದಿನಾಂಕ 23–04–2003 ರಂತೆ ಅನುಮತಿ ಪಡೆಯಬೇಕಾಗಿರುತ್ತದೆ. ಕೈಗಾರಿಕೆಗಳಿಗೆ 10 ಯೂನಿಟ್‌ವರೆಗೆ, 2 ಯೂನಿಟ್‌ವರೆಗೆ ವಿದ್ಯಾಸಂಸ್ಥೆಗಳಿಗೆ, 1/4 ಯೂನಿಟ್‌ವರೆಗೆ ಮಾನ್ಯತೆ ಪಡೆದ ಅಥವಾ ನೋಂದಾಯಿತ ಪೂಜಾ ಸ್ಥಳಕ್ಕೆ, ವ್ಯವಸಾಯೇತರ ಉದ್ದೇಶಕ್ಕೆ ರಾಜ್ಯ ಸರ್ಕಾರದ ವಸತಿ ಯೋಜನೆಗಳಿಗೆ 10 ಯುನಿಟ್‌ವರೆಗೆ ಹಾಗೂ ಪುಷ್ಪಗಾರಿಕೆ, ತೋಟಗಾರಿಕೆ ಮತ್ತು ಆಗ್ರೋಇಂಡಸ್ಟ್ರೀಸ್‌ಗಳಿಗೆ 10 ಯುನಿಟ್‌ಗಳವರೆಗೆ ಜಮೀನು ಖರೀದಿಸಲು ಅನುಮತಿಯನ್ನು ಜಿಲ್ಲಾಧಿಕಾರಿಯವರಿಂದ ಪಡೆಯಬೇಕಾಗಿರುತ್ತದೆ. ಮೇಲ್ಕಂಡ ಮಿತಿಗಿಂತ ಹೆಚ್ಚು ಜಮೀನು ಖರೀದಿಸಲು ಬರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ. ರೂ.2.00 ಲಕ್ಷ ವಾರ್ಷಿಕ ಆದಾಯದ ಮಿತಿಯುಳ್ಳವರಿಗೆ ಕರ್ನಾಟಕ ಭೂ ಸುಧಾರಣೆ ಕಾಯಿದೆ ಕಲಂ 80ರಡಿ ವೈಯಕ್ತಿಕವಾಗಿ ಜಮೀನು ಖರೀದಿಸಲು ಉಪವಿಭಾಗಾಧಿಕಾರಿಗಳಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಕಲಂ 79 ಎ ಮತ್ತು 79 ಬಿ ಉಲ್ಲಂಘಿಸಿದ ಜಮೀನುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ಬೇಡಿಕೆ ವಸೂಲಿ ಬಾಕಿ (ಡಿ.ಸಿ.ಬಿ)

ಕೃಷಿಜಮೀನುಗಳ ಹಿಡುವಳಿಗಳ ಮೇಲೆ ನಿಗಧಿಪಡಿಸಿದ ಕಂದಾಯ, ನೀರಾವರಿ ಕರ ಮತ್ತು ಇತರೆ ಕಂದಾಯಗಳ ಬೇಡಿಕೆಪಟ್ಟಿ ತಯಾರಿಸುವುದು, ವಸೂಲಿ ಮತ್ತು ಬಾಕಿಗಳ ನಿರ್ವಹಣೆ ಕೈಗೊಳ್ಳುವುದು. ಸರ್ಕಾರದ ಇತರೆ ಇಲಾಖೆಗಳಿಂದ ವಸೂಲಿ ಮಾಡದೆ ಇರುವ ತೆರಿಗೆಗಳ ಬಾಕಿಗಳು ಮತ್ತು ಸಾಲಗಳನ್ನು ಬಾಕಿ ಇರುವ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿವರ್ತಿಸಿ ವಸೂಲಿ ಕ್ರಮ ಜರುಗಿಸುವುದು.

ವಿಫಲಭಾವಿ ಪರಿಹಾರ:

ಸರ್ಕಾರದಿಂದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀರಾವರಿ ಸೌಲಭ್ಯಕ್ಕಾಗಿ ತೊಡಗಿಸಿದ ತೆರೆದ ಭಾವಿಗಳ ಮತ್ತು ಕೊಳವೆ ಭಾವಿಗಳು ವಿಫಲವಾದಲ್ಲಿ ಸಂತ್ರಸ್ಥರಿಗೆ ವಿಫಲಭಾವಿಗೆ ಜಲ ಉತ್ಪತ್ತಿ ವಿಫಲ ಪರಿಹಾರ ಮಂಜೂರು ಮಾಡುವುದು.

ಗಣಿಗಾರಿಕೆ:

ಸರ್ಕಾರದ ಕೃಷಿಯೇತರ ಹಾಗೂ ಬೇರೆ ಜಮೀನುಗಳಲ್ಲಿ ನಡೆಯುವ ಗಣಿಗಾರಿಕೆಗೆ ಅನುಮತಿ ನೀಡುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಅಭಿಪ್ರಾಯ ಸಲ್ಲಿಸುವುದು.

ಜಮಾಬಂದಿ:

ಎಲ್ಲಾ ಕಂದಾಯ ಗ್ರಾಮಗಳ ಜಮೀನುಗಳಗೆ ಸಂಬಂಧಿಸಿದಂತೆ ವಾರ್ಷಿಕ ಕಂದಾಯ, ನಿಗಧಿ ವಸೂಲಾತಿ ಮತ್ತು ಬಾಕಿ ವಿವರಗಳನ್ನೊಳಗೊಂಡಂತೆ ಹಾಗೂ ಭೂ ಕಂದಾಯ ಮನ್ನಾ ಮಾಡಲಾಗಿರುವ ಮತ್ತು ಸರ್ಕಾರಿ ಜಮೀನುಗಳ ವಿವರಗಳನ್ನೊಳಗೊಂಡಂತೆ ವಾರ್ಷಿಕ ಜಮಾ ಬಂದಿಯನ್ನು ತಾಲ್ಲೂಕು ಜಮಾ ಬಂದಿಯನ್ನು ಆಯಾಯ ತಹಶೀಲ್ದಾರ್‌ಗಳು ಮತ್ತು ಹುಜೂರ್ ಲೆಕ್ಕವನ್ನು ಜಿಲ್ಲೆಯ ಜಿಲ್ಲಾಧಿಕಾರಿ ಮತ್ತು ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಜಮಾಬಂದಿ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಕಾನೂನು ವಿಭಾಗ:

ಜಿಲ್ಲಾವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿ ಜಿಲ್ಲಾದಂಡಾಧಿಕಾರಿಗಳಾಗಿದ್ದು, ಅವರ ಅಧೀನದಲ್ಲಿ ಬರುವ ಅಪರ ಜಿಲ್ಲಾಧಿಕಾರಿಯವರು ಅಪರ ದಂಢಾಧಿಕಾರಿಗಳಾಗಿ ಕೆಲಸ ನಿರ್ವಹಿಸುತ್ತಾರೆ. ಇವರ ಕಾರ್ಯ ನಿರ್ವಹಣೆಗೆ ಮತ್ತು ಕಾನೂನು ಮತ್ತು ಸುವ್ಯ ವಸ್ಥೆ ಪಾಲನೆ ಮತ್ತು ಯಾರಾದರೂ ಗಣ್ಯವ್ಯಕ್ತಿಗಳು ಬಂದಲ್ಲಿ ಅವರಿಗೆ ಬಂದೋಬಸ್ತ್ ಅನುಕೂಲತೆ ನೀಡಿ ವಾಹನವನ್ನು ಒದಗಿಸುವುದು ಹಾಗೂ ಖಾಸಗಿ ಜನರಿಗೆ ಶಸ್ತ್ರಸ್ತ್ರ ಮಂಜೂರು ಮನರಂಜನ ಕಾರ್ಯಕ್ರಮಗಳು ಚಲನಚಿತ್ರಗಳಿಗೆ,

ನಾಟಕ, ಸರ್ಕಸ್ಸು, ಇತರೆ ಸಾಂಸ್ಕೃತಿಕ ಚಟುವಟಿಕೆಗಳಿಗೆ ಅನುಮತಿ ನೀಡುವುದು ಅಸ್ಪೃಷ್ಯತೆ ಕಾನೂನು ಪಾಲನೆ, ಮಹಿಳಾ ದೌರ್ಜನ್ಯ, ವಾಹನಗಳಿಂದ ಅಪಘಾತವಾದವರಿಗೆ ಪರಿಹಾರ ನೀಡಲಾಗುತ್ತದೆ.

ವಸತಿ ಯೋಜನೆ:

ಸರ್ಕಾರದ ವಸತಿ ಯೋಜನೆಗಳಾದ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಜ್ ಯೋಜನೆಯಡಿ ವಸತಿ ಹೀನರಿಗೆ ಮತ್ತು ಅವರಿಗೆ ವಸತಿ ನಿರ್ಮಾಣಗಳನ್ನು ಮಾಡಲು ನಿವೇಶನಗಳಿಗಾಗಿ ಅರ್ಹವಿರುವ ಭೂವಿಯನ್ನು ಭೂಸ್ವಾಧೀನ ಮೂಲಕವಾಗಲೀ ಹಾಗೂ ಮಂಜೂರಾತಿ ಮೂಲಕವಾಗಲೀ ಕ್ರಮ ಜರುಗಿಸಲಾಗುತ್ತದೆ.

ಪಹಣಿ ಹಕ್ಕು ದಾಖಲೆ : ಭೂಮಿ

ಕರ್ನಾಟಕ ಭೂ ಕಂದಾಯ ಕಾಯ್ದೆ ಅಡಿಯಲ್ಲಿ ಪಟ್ಟ ಜಮೀನುಗಳಲ್ಲಿ ಹಕ್ಕು ದಾಖಲೆಗಳ ವರ್ಗ, ಮಾರಾಟ ಇತ್ಯಾಧಿ ಬದಲಾವಣೆಗಳ ನಿರ್ವಹಣೆ, ವರ್ಗಾವಣೆಯಲ್ಲಿ ಆದ ಲೋಪದೋಷಗಳನ್ನು ವಿಚಾರಣೆ ಮತ್ತು ನ್ಯಾಯಾಂಗ ಪರಿಶೀಲನೆ, ನ್ಯಾಯಾಲಯಗಳಿಂದ ಡಿಕ್ರಿಗಳ ಆದೇಶಗಳನ್ನು ದಾಖಲೆಗಳಲ್ಲಿ ಸೇರ್ಪಡೆ ಮಾಡುವುದು ಮತ್ತು ಹಕ್ಕು ದಾಖಲೆಗಳನ್ನು ಗಣಕೀಕರಣಗಳ ಮೂಲಕ ಸಾರ್ವಜನಿಕರಿಂದ ರೂ.15-00 ಗಳನ್ನು ಪಡೆದು ಪಹಣಿಗಳನ್ನು ವಿತರಿಸಲಾಗುವುದು ಮತ್ತು ಮೇಲ್ವಿಚಾರಣೆ ಮಾಡಲಾಗುವುದು.

ದೇವಸ್ಥಾನ / ವಕ್ಫ್:

ಧಾರ್ಮಿಕ ಮತ್ತು ದತ್ತಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಎಲ್ಲಾ ದೇವಸ್ಥಾನಗಳ ಕಾರ್ಯ ನಿರ್ವಹಣೆ ಮತ್ತು ಟ್ರಸ್ಟ್ ನೇಮಕಾತಿ ಮಾಡುವುದು ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಸ್ಥಾನಗಳ ಜಾತ್ರೆ ಉತ್ಸವಗಳನ್ನು ನಡೆಸುವುದು. ಆರಾಧನ ಸಾಮಾನ್ಯ ಯೋಜನೆ ಅಡಿಯಲ್ಲಿ ದೇವಸ್ಥಾನಗಳ ಜೀರ್ಣೋದ್ದಾರ ಸಂಬಂಧ ಅನುದಾನ ಮಂಜೂರು ಮಾಡುವುದು ಅದಕ್ಕೆ ಹಣ ಬಳಕೆ ಪ್ರಮಾಣ ಪತ್ರಗಳನ್ನು ಪಡೆದು ಸರ್ಕಾರಕ್ಕೆ ಸಲ್ಲಿಸುವುದು ಹಾಗೂ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆ, ತಸ್ತಿಕ್ ಭತ್ಯೆ ವರ್ಷಾಸನಗಳ ಮಂಜೂರಿ ಮಾಡಲಾಗುತ್ತದೆ.

ಲೆಕ್ಕ ಪತ್ರ:

ಜಿಲ್ಲೆಯ ಎಲ್ಲಾ ಅಧೀನ ಕಾರ್ಯಾಲಯಗಳ ವಾರ್ಷಿಕ ಅಂದಾಜು ಮತ್ತು ಖರ್ಚುಗಳ ವ್ಯವಹಾರಗಳ ನಿರ್ವಹಣೆ ಜಿಲ್ಲಾಧಿಕಾರಿಯವರ ಕಾರ್ಯಾಲಯದ ಸಿಬ್ಬಂದಿ ವೇತನ, ಪ್ರವಾಸ ಭತ್ಯೆ, ಸಾದಿಲ್ವಾರು ವೆಚ್ಚ ವಾಹನಗಳ ಇಂಧನ ಮತ್ತು ದುರಸ್ತಿ ವೆಚ್ಚ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಖರ್ಚುಮಾಡುವ ಬಿಲ್ಲುಗಳ ತಯಾರಿಕೆ ಮತ್ತು ಬಟವಾಡೆ ಅವಧಿ ಮೀರಿದ ಬಿಲ್ಲುಗಳ ಖರ್ಚಿನ ವಿಳಂಬ ಮಂಜೂರು ಮಾಡುವುದು.

ನಗರಸಭೆ/ಪುರಸಭೆ:

ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ನಗರಸಭೆ, ಪುರಸಭೆಗಳ ಆಡಳಿತ ನಿರ್ವಹಣೆ ಇವುಗಳ ತಪಾಸಣೆ ಹಾಗೂ ಇವುಗಳ ವ್ಯಾಪ್ತಿಯಲ್ಲಿ ಬರುವ ಕಾನೂನು ಸುವ್ಯವಸ್ಥೆ ಯೋಜನೆಗಳ ಕಾಮಗಾರಿಗಳ ಮಂಜೂರಿ ಎಸ್‌ಜಿಎಸ್‌ಆರ್‌ವೈ ಯೋಜನೆ ಸಂಪೂರ್ಣ ಅನುಷ್ಠಾನಗೊಳಿಸುವುದು ಹಾಗೂ ವಸತಿಹೀನರಿಗೆ ವಸತಿ ಕಲ್ಪಿಸಲಾಗುತ್ತದೆ.

ಎಂ.ಪಿ. ಲ್ಯಾಡ್: ಎಂ.ಎಲ್ ಎ : ಎಂ ಎಲ್ ಸಿ ಲ್ಯಾಡ್:

ಕೇಂದ್ರ ಸರ್ಕಾರದಿಂದ ಬರುವ ಲೋಕಸಭಾ ಸದಸ್ಯರ ಅನುದಾನ ಹಾಗೂ ರಾಜ್ಯ ಸರ್ಕಾರದಿಂದ ವಿಧಾನಸಭಾ ಸದಸ್ಯರ :ವಿಧಾನ ಪರಿಷತ್ ಅನುದಾನವು ಬಿಡುಗಡೆಯಾಗುತ್ತಿದ್ದು, ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಅವುಗಳಿಗೆ ಸಂಬಂಧಿಸಿದ ಕಾಮಗಾರಿಗಳಿಗೆ ಅನುಮತಿ ಪಡೆದು ಅವುಗಳನ್ನು ಕಾರ್ಯಗತಗೊಳಿಸಲಾಗುವುದು.

ಇನಾಂ:

ಇನಾಂ ರದ್ದತಿ ಕಾಯ್ದೆ ಅಡಿಯಲ್ಲಿ ಸರ್ಕಾರದ ಸ್ವಾಧೀನದಲ್ಲಿರುವ ಜಮೀನುಗಳನ್ನು ಇನಾಂದಾರರು/ಗೇಣಿದಾರರು ಮತ್ತು ಇತರೆ ಅಪೇಕ್ಷಿತರಿಂದ ಬಂದಂತಹ ಅರ್ಜಿಗಳನ್ನು ವಿಚಾರಣೆ ಮಾಡಿ ಅರ್ಹಫಲಾನುಭವಿಗಳಿಗೆ ಮಂಜೂರಾತಿ ನೀಡುವುದು.

ಚುನಾವಣೆ:

ಕೇಂದ್ರ ಚುನಾವಣಾ ಆಯೋಗದಿಂದ ನಿಗದಿ ಪಡಿಸಿದ ಲೋಕಸಭೆ ಚುನಾವಣೆ ಮತ್ತು ವಿಧಾನ ಸಭೆ ಚುನಾವಣೆ ಹಾಗೂ ಸರ್ಕಾರದ ಸ್ಥಳೀಯ ಚುನಾವಣೆಗಳಾದ ಜಿಲ್ಲಾ : ತಾಲ್ಲೂಕು : ಗ್ರಾಮ ಪಂಚಾಯಿತಿಗಳು ಹಾಗೂ ನಗರಸಭೆ : ಪುರಸಭೆಗಳ ಚುನಾವಣೆ ಕಾರ್ಯಸೂಚಿ ಪ್ರಕಾರ ಚುನಾವಣೆ ಕಾರ್ಯ ಕ್ರಮಗಳನ್ನು ರೂಪಿಸುವುದು, ಚುನಾವಣೆಗೆ ಸಂಬಂಧಿಸಿದ

ವ್ಯವಹಾರಗಳ ನಿರ್ವಹಣೆ ಮತ್ತು ಮತದಾರರಿಗೆ ಮತದಾರರ ಗುರ್ತಿನ ಚೀಟಿ ನೀಡುವುದು ಹಾಗೂ ಮತದಾರರ ಪಟ್ಟಿಗಳ ನಿರ್ವಹಣೆ.

ಪಿ.ಜಿ.ಸಿ:

ಜಿಲ್ಲಾಧಿಕಾರಿಯವರ ಅಧೀನದಲ್ಲಿ ಬರುವ ಎಲ್ಲಾ ಕಛೇರಿಗಳಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಒಂದು ಸೆಲ್ ತೆರೆಯಲಾಗಿದ್ದು ಈ ವಿಷಯದಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿಗಳನ್ನು ಕಳುಹಿಸಿ ಅದನ್ನು ವಿಚಾರಣೆ ಮಾಡಿಸಿ ವರದಿ ಪಡೆದು ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡುವುದು ಮತ್ತು ಸರ್ಕಾರಕ್ಕೆ ಮಾಹಿತಿ ಸಲ್ಲಿಸುವುದು.

ಅಭಿಲೇಖಾಲಯ:

ಕಾರ್ಯಾಲಯದ ಪ್ರತಿಯೊಂದು ಶಾಖೆಯಿಂದ ನಿರ್ವಹಣೆಗಾಗಿ ಕಛೇರಿ ಸಹಾಯಕರಿಂದ ಬೇರೆ ಬೇರೆ ವಿಲೇಗಳ ಬಗ್ಗೆ ಎಷ್ಟು ಕಾಲ ಕಾಯ್ದಿರಿಸಬೇಕೆಂಬುದನ್ನು ಆದೇಶ ಪಡೆದು ಈ ಕೆಳ ಕಾಣಿಸಿದ ಪ್ರಕಾರ ವರ್ಗೀಕರಿಸಿ ಹಾಗೂ ಸಂರಕ್ಷಿಸಲಾಗುವುದು.

ಎ. ಡಿಸ್–ಅನಿರ್ದಿಷ್ಟ

ಬಿ. ಡಿಸ್ ಮೂವತ್ತು ವರ್ಷ

ಸಿ. ಡಿಸ್ ಹತ್ತು ವರ್ಷ

ಡಿ. ಡಿಸ್ ಐದು ವರ್ಷ

ಇ. ಡಿಸ್ ಒಂದು ವರ್ಷ

ಮೇಲೆ ಕಾಣಿಸಿದ ವಿಲೇವಾರಿಗಳ ಅವಧಿ ಮುಗಿದ ನಂತರ ಕಛೇರಿ ಸಹಾಯಕರ ಆದೇಶವನ್ನು ಪಡೆದು ಎ ಮತ್ತು ಬಿ ಡಿಸ್‌ಗಳಲ್ಲಿನ ಕಡತಗಳನ್ನು ಹೊರತು ಪಡಿಸಿ, ನಾಶಗೊಳಿಸಲಾಗುವುದು.

ಕಾರ್ಯಾಲಯ ಪೀಠೋಪಕರಣ ಕಾರ್ಯ ನಿರ್ವಾಹಣೆ, ಯಂತ್ರ ಸಾಮಾಗ್ರಿಗಳ ಖರೀದಿ ಮತ್ತು ದುರಸ್ತಿ ಕಾರ್ಯಾಲಯದ ವ್ಯವಹಾರಕ್ಕೆ ಅಗತ್ಯವಿರುವ ಲೇಖನ ಸಾಮಗ್ರಿ ಖರೀದಿ ಮತ್ತು ವಿತರಣೆ, ಕಛೇರಿಯ ಸುವ್ಯವಸ್ಥೆ, ವಿದ್ಯುದೀಕರಣ ನಿರ್ವಹಣೆ, ವಿವಿಧ ಕಾಯ್ದೆಗಳ ಪುಸ್ತಕಗಳನ್ನು ಸುಸ್ಥಿತಿಯಲ್ಲಿ ಇಡುವುದು ಮತ್ತು ಸಂಬಂಧ ಪಟ್ಟ ವಿಷಯ ನಿರ್ವಾಹಕರು ಕಡತ ಬೇಕೆಂದು ಕೋರಿಕೆ ಚೀಟಿ ಸಲ್ಲಿಸಿದಾಗ ಸಂಬಂಧಪಟ್ಟ ಕಡತವನ್ನು ನೀಡುವುದು, ಅಲ್ಲದೇ ಸಾರ್ವಜನಿಕರು ಕೋರುವ ದಾಖಲೆಗಳ ಪ್ರತಿಗಳನ್ನು ನಿಯಮಾನುಸಾರ ನೀಡುವುದು.

ಸಂಕೀರ್ಣ:

ಸಾಮಾಜಿಕ ಭದ್ರತಾ ಯೋಜನೆ ಅಡಿಯಲ್ಲಿ ಬರುವ ಫಲಾನುಭವಿಗಳಿಗೆ ಅನುದಾನ ಬಿಡುಗಡೆ, ಸ್ವಾತಂತ್ರ್ಯ ಯೋಧರಿಗೆ ಕೇಂದ್ರ ಮತ್ತು ರಾಜ್ಯ ಗೌರವಧನ ಮಂಜೂರಿ, ವೃದ್ದಾಪ್ಯ ವೇತನ, ಅಂಗವಿಕಲ ವೇತನ, ವಿಧವಾ ವೇತನ ಹಾಗೂ ಬುದ್ದಿ ಮಾಂಧ್ಯ ವೇತನದಾರರಿಗೆ ಮಾಸಾಶನ ನಿರ್ವಹಣೆ ಮಾಡುತ್ತಿದ್ದು, ಸರ್ಕಾರಕ್ಕೆ ಸೂಕ್ತ ಪರಿಶೀಲನಾ ಪ್ರಸ್ತಾವನೆಗಳನ್ನು ಸಲ್ಲಿಸಿ, ಗೌರವಧವನ್ನು ಜಾರಿಗೊಳಿಸುವಲ್ಲಿ ಕ್ರಮ ಜರುಗಿಸಲಾಗುತ್ತಿದೆ ಹಾಗೂ ಜಾತಿ ಮತ್ತು ಆದಾಯ ಧೃಢೀಕರಣ ಪತ್ರಗಳ ನಿರ್ವಹಣೆ ಮತ್ತು ವಿತರಣೆ ಮಾಡುವುದು.

ಸ್ವೀಕೃತಿ:

ಕಾರ್ಯಾಲಯಕ್ಕೆ ಸ್ವೀಕೃತಿಯಾಗುವ ಸರ್ಕಾರ, ಅಧೀನ ಕಾರ್ಯಾಲಯದ ಮತ್ತು ಸಾರ್ವಜನಿಕರಿಂದ, ಲೋಕಸಭೆ/ವಿಧಾನ ಪರಿಷತ್ ಹಾಗೂ ಸ್ಥಳೀಯ ಸಂಸ್ಥೆಯ ಸದಸ್ಯರುಗಳಿಂದ ಸ್ವೀಕೃತಿಯಾದ ಪ್ಯಾಕ್ಸ್, ತಂತಿ ಸಂದೇಶ, ಸುತ್ತೋಲೆ, ಸಾಮಾನ್ಯ ಅರ್ಜಿಗಳನ್ನು ಸಾಮಾನ್ಯ ಪುಸ್ತಕದಲ್ಲಿ ಮತ್ತು ಇತರ ಪುಸ್ತಕಗಳಲ್ಲಿ ನೊಂದಣಿ ಮಾಡಿಕೊಂಡು ಆಯಾಯ ಶಾಖೆಯ ವಿಷಯ ನಿರ್ವಾಹಕರಿಗೆ ವಿತರಣೆಯನ್ನು ಮಾಡುವುದು.

ರವಾನೆ:

ಈ ಕಾರ್ಯಾಲಯದಿಂದ ಬಿಡುಗಡೆ ಆಗುವ ವ್ಯವಹಾರಗಳ ಪತ್ರಗಳ ಆದೇಶಗಳು ಹಾಗೂ ನೋಟಿಸುಗಳನ್ನು ರವಾನೆ ಪುಸ್ತಕದಲ್ಲಿ ನೊಂದಣಿ ಮಾಡಿಕೊಂಡು ಸಂಬಂಧಪಟ್ಟ ಕಛೇರಿ ಇತರರಿಗೆ ರವಾನೆ ಮಾಡುವುದು ಇವುಗಳಲ್ಲಿ ಕೆಲವು ಅಂಚೆ ಮೂಲಕ ಹಾಗೂ ಕೆಲವು ಸ್ಥಳೀಯವಾಗಿ ಜಾರಿ ಮಾಡುವ ಪತ್ರಗಳನ್ನು ಪ್ರತ್ಯೇಕ ವಹಿಯಲ್ಲಿ ನೊಂದಾಯಿಸಿ ರವಾನೆ ಮಾಡುವುದು, ಹಾಗೂ ಅಂಚೆ ಚೀಟಿಗಳ ಲೆಕ್ಕವನ್ನು ಸಹ ಇಡಲಾಗುವುದು.

ಅಧ್ಯಾಯ–3

ಕಲಂ 4(1) (b)(iii)

ಜಿಲ್ಲಾ ಘಟಕದ ಕಛೇರಿಯ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ:

ಜಿಲ್ಲಾ ಕಚೇರಿಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂಧಿಯ ಅಧಿಕಾರ ಮತ್ತು ಕರ್ತವ್ಯಗಳ ಬಗ್ಗೆ ನಂ:EST(1).ಸಿ.ಆರ್.104/07–08, ದಿನಾಂಕ: 12.03.2009 ರಂತೆ ಅಧಿಕೃತ ಜ್ಞಾಪನದಲ್ಲಿ ಕಾರ್ಯನಿರ್ವಹಣಾ ಆದೇಶ ಜಾರಿಗೊಳಿಸಿದೆ.ಅಂತೆಯೇ ಸಿಬ್ಬಂದಿ ವರ್ಗದವರ ಕಾರ್ಯ ನಿರ್ವಹಿಸುತ್ತಿದ್ದಾರೆ.

ಮೇಲೆ ತಿಳಿಸಿರುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ (ಗ್ರೂಪ್–ಸಿ, ಮತ್ತು ಡಿ) ಜಿಲ್ಲಾಧಿಕಾರಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಕಛೇರಿಯಲ್ಲಿ ನಿರ್ವಹಿಸುವ ಎಲ್ಲಾ ಸಂಬಂಧಿಸಿದ ಶಾಖೆಗಳ ವಿಷಯಗಳಲ್ಲಿ ಅಂತಿಮ ತೀರ್ಮಾನ ಕೈಗೊಳ್ಳುವ ಅಧಿಕಾರಿ ಜಿಲ್ಲಾಧಿಕಾರಿಗಳಾಗಿರುತ್ತಾರೆ.

1. ಕಾಗದ ಪತ್ರಗಳ ಸ್ವೀಕೃತಿ ವಿಲೇವಾರಿ:

ಸಾರ್ವಜನಿಕರಿಂದ ,ಅಧೀನ ಕಛೇರಿಗಳಿಂದ ಮತ್ತು ಸರ್ಕಾರ ಹಾಗೂ ಮೇಲಾಧಿಕಾರಿಗಳಿಂದ ಬರುವಂತಹ ಎಲ್ಲಾ ಕಾಗದ ಪತ್ರಗಳನ್ನು/ ಕಡತಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ಸ್ವೀಕರಿಸಿ, ಸಾರ್ವಜನಿಕರ ಮನವಿ ಬಗ್ಗೆ ಸ್ಥಳದಲ್ಲೇ ಸ್ವೀಕೃತಿ ಪತ್ರವನ್ನು ನೀಡಿ ನಂತರ ಕಛೇರಿ ಸಹಾಯಕರು, ಅಪರ ಜಿಲ್ಲಾಧಿಕಾರಿ ಮುಖಾಂತರ ಜಿಲ್ಲಾಧಿಕಾರಿಯವರ ಗಮನಕ್ಕೆ ತಂದು ಸ್ವೀಕೃತಿ ಶಾಖೆಯಲ್ಲಿ ಕಂಪ್ಯೂಟರೀಕರಣಗೊಳಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಪ್ರತಿ ಕಡತ/ಕಾಗದ ಪತ್ರಗಳನ್ನು ಶಾಖೆವಾರು ಗುರುತಿಸುವಂತೆ Triletter Index ಹಾಕಿದ ನಂತರ ಅಗತ್ಯ ಕ್ರಮ ಕೈಗೊಳ್ಳಲು ನೀಡಲಾಗುತ್ತದೆ. ಉದಾಹರಣೆಗೆ:

1. ಭೂ ಮಂಜೂರಾತಿ (ಎನ್.ಎನ್.ಡಿ.)
2. ಭೂಸ್ವಾಧೀನ (ಎಲ್.ಆರ್.ಎಫ್)
3. ಭೂಸ್ವಾಧೀನ (ಎಲ್.ಎ.ಕ್ಯೂ)
4. ಲೆಕ್ಕಶಾಖೆ (ಎ.ಸಿ.ಟಿ)
5. ಪ್ರಕೃತಿ ವಿಕೋಪ (ಸಿಆರ್ಎಫ್)
6. ಹಕ್ಕು ದಾಖಲೆ (ಆರ್.ಆರ್.ಟಿ)
7. ಸಿಬ್ಬಂಧಿ ಶಾಖೆ (ಇ.ಎಸ್.ಟಿ)
8. ನಗರ ಭೂಪರಿಮಿತಿ ಶಾಖೆ (ಯು.ಎಲ್.ಸಿ.)
9. ಅಭಿಲೇಖಾಲಯ (ಆರ್.ಕೆ)
10. ಭೂಪರಿವರ್ತನೆ (ಎ.ಎಲ್.ಎನ್)
11. ಸ್ವಾತಂತ್ರ್ಯ ಹೋರಾಟಗಾರರ ಗೌರವಧನ (ಎಫ್.ಎಫ್.ಪಿ)
12. ಚುನಾವಣೆ (ಇ.ಎಲ್.ಎನ್)
13. ಆಡಳಿತ (ಎ.ಡಿ.ಎಂ)
14. ಮೆಜಿಸ್ಟೀರಿಯಲ್ ಶಾಖೆ (ಎಂ.ಎ.ಜಿ)
15. ಕರ್ನಾಟಕ ಪರಿಶಿಷ್ಟ ಜಾತಿ/ವರ್ಗಗಳ ಪರಭಾರೆ ನಿಷೇಧ (ಪಿಟಿಸಿಎಲ್)
16. ಗಡಿ ಪ್ರದೇಶಾಬಿವೃದ್ಧಿ ಯೋಜನೆ (ಬಿ.ಎ.ಡಿ.ಪಿ)
17. ಕರ್ನಾಟಕ ಗ್ರಾಮ ರದ್ದಿಯಾತಿ ಕಾಯ್ದೆ (ಹೆಚ್.ಒ.ಎ)
18. ನೀರಾವರಿ (ಐ.ಆರ್.ಆರ್)
19. ಅರಣ್ಯ (ಎಫ್.ಒ.ಆರ್)
20. ಕೊಳಚೆ ಪ್ರದೇಶ (ಕೆ.ಎ.ಎಸ್)
21. ಸಾಲ್ವೆನ್ಸಿ (ಎಸ್.ಒ.ಎಲ್)
22. ಸೋಲೇಷಿಯಂ ಫಂಡ್ (ಎಫ್.ಎಫ್.ಎಸ್)
23. ವಿಧಾನಸಭಾ/ಪರಿಷತ್ ಸದಸ್ಯರ ನಿಧಿ, (ಕೆ.ಎಲ್.ಎ.ಎಡಿ)

24. ಲೋಕಸಭಾ ಸದಸ್ಯರ ನಿಧಿ (ಎಂ.ಪಿ.ಎಲ್.ಎ.ಡಿ)
25. ಮಿಸಲೇನಿಯಸ್ (ಎಂ.ಎಸ್.ಸಿ.)
26. ಸಾರ್ವಜನಿಕ ಕುಂದುಕೊರತೆ (ಪಿ.ಜಿ.ಸಿ)
27. ದಲಿತ ಬೇಡಿಕೆಗಳು (ಡಿ.ಎಸ್.ಎಸ್.)
28. ಪ್ರಕೃತಿ ವಿಕೋಪ (ಸಿ.ಎ.ಎಲ್)

ಅಧ್ಯಾಯ–4

ಕಲಂ 4(1) (b)(iv)

ಕಛೇರಿ ಪ್ರಕಾರಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು:

1. ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಸ್ವೀಕರಿಸಲಾಗುವ ಎಲ್ಲಾ ಕಾಗದ ಪತ್ರಗಳನ್ನು ಸಾಮಾನ್ಯ ಸ್ವೀಕೃತಿ ಶಾಖೆಯಲ್ಲಿ ಗಣಕೀಕರಣಗೊಳಿಸಿ ವಿಷಯ ನಿರ್ವಾಹಕರಿಗೆ ನೀಡುವ ವ್ಯವಸ್ಥೆ ಮಾಡಲಾಗಿದೆ.
2. ಸಾರ್ವಜನಿಕರಿಂದ ಸ್ವೀಕರಿಸಲಾಗುವ ಕಾಗದ ಪತ್ರಗಳಿಗೆ ಸ್ವೀಕೃತಿ ನೀಡುವುದಲ್ಲದೆ ಕಾರ್ಯಗತ ಅವಧಿ ನಿಗದಿಪಡಿಸಿ ತಿಳಿಸಲಾಗುತ್ತಿದೆ.
3. ಸಾರ್ವಜನಿಕ ಕುಂದು ಕೊರತೆಗಳ ನಿವಾರಣೆ ಬಗ್ಗೆ ಪ್ರತ್ಯೇಕ ಕೌಂಟರ್ ತೆರೆದು ಇಲ್ಲಿ ಸ್ವೀಕರಿಸಲಾಗುವ ಎಲ್ಲಾ ಮನವಿಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ನಮೂದಿಸಿ, ಕ್ಲುಪ್ತ ಕಾಲದಲ್ಲಿ ಉತ್ತರ ನೀಡುವುದು. ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು.ಇಲಾಖೆ ಪ್ರಕಾರ್ಯಗಳ ಪ್ರಗತಿ ಪರಿಶೀಲಿಸಲು ಪ್ರತಿ ಮಾಹೆಯಲ್ಲಿ ಕಂದಾಯ ಅಧಿಕಾರಿಗಳ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಗಳನ್ನು ಏರ್ಪಡಿಸುವುದು.

ಕಛೇರಿ ಕೈಪಿಡಿ ನಿಯಮಗಳ ರೀತಿ ಪತ್ರಗಳನ್ನು ವಿಷಯ ನಿರ್ವಾಹಕರು ಸ್ವೀಕರಿಸಿ, ಗರಿಷ್ಠ 5 ದಿವಸಗಳೊಳಗಾಗಿ ವಿಷಯ ನಿರ್ವಾಹಕರು ಎಲ್ಲಾ ಸ್ವೀಕರಿಸುವ ಪತ್ರಗಳನ್ನು ವಿಷಯ ನಿರ್ವಾಹಕರ ದಿನಚರಿಯಲ್ಲಿ ನಮೂದಿಸಿಕೊಂಡು ತದನಂತರ ವಿಷಯವಹಿಯಲ್ಲಿ ಅನುಕ್ರಮವಾಗಿ ನೋಂದಾಯಿಸಿಕೊಂಡು ಕಡತಗಳಲ್ಲಿ ಟಿಪ್ಪಣಿ ಹಾಕಿ ಮಂಡಿಸುತ್ತಾರೆ. ವಿಷಯ ನಿರ್ವಾಹಕರೆಲ್ಲರೂ ಕಛೇರಿ ಕಾರ್ಯವಿಧಾನದ ರೀತಿ ಐದು ಕಟ್ಟು (Bundle System) ವಿಧಾನ ಅಳವಡಿಸಿ ಕಾರ್ಯನಿರ್ವಹಿಸುತ್ತಾರೆ. ವಿಷಯ ನಿರ್ವಾಹಕರಿಂದ ಬಂದಂತಹ ಎಲ್ಲಾ ಕಡತಗಳ ಪರಿಶೀಲನೆ ಮಾಡಿ ಶಾಖಾ ಮುಖ್ಯಸ್ಥರು, ಕಛೇರಿ ಸಹಾಯಕರು/ ಚುನಾವಣಾ ತಹಶೀಲ್ದಾರ್/ಮುಜರಾಯಿ ಸಹಾಯಕರುಗಳಿಗೆ ವಿಳಂಬವಾಗದ ರೀತಿಯಲ್ಲಿ ಕಡತದಲ್ಲಿ ವಿಷಯವಾರು ತೀರ್ಮಾನ ಕೈಗೊಳ್ಳುವ ನಿಟ್ಟಿನಲ್ಲಿ ಸೂಕ್ತ ಅಭಿಪ್ರಾಯದೊಂದಿಗೆ ಸಲ್ಲಿಸುತ್ತಾರೆ.

ಕಛೇರಿ ಸಹಾಯಕರು/ಚುನಾವಣಾ ತಹಶೀಲ್ದಾರ್/ಮುಜರಾಯಿ ಸಹಾಯಕರು, ಶಾಖಾ ಮುಖ್ಯಸ್ಥರಿಂದ ಬಂದಂತಹ ಕಡತಗಳನ್ನು ಪರಿಶೀಲಿಸಿ ತಮ್ಮ ಅಭಿಪ್ರಾಯದೊಂದಿಗೆ ಅಪರ ಜಿಲ್ಲಾಧಿಕಾರಿಯವರಿಗೆ ಕಡತಗಳನ್ನು ಸಲ್ಲಿಸುತ್ತಾರೆ.

ಅಪರ ಜಿಲ್ಲಾಧಿಕಾರಿಯವರು ತಮಗೆ ಬರುವ ಕಡತಗಳಲ್ಲಿ ಅವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ವೇತನ ಬಟವಾಡೆ ಮತ್ತು ಜಿಲ್ಲಾಧಿಕಾರಿಗಳಿಂದ ಆದೇಶ ಪಡೆದಂತಹ ಹಾಗೂ ಅಧೀನ ಕಛೇರಿಗಳಿಗೆ ಕಳುಹಿಸುವಂತಹ ಕಡತಗಳ ವಿಲೇವಾರಿ ಮಾಡಲಿದ್ದು, ಪಾಲಿಸಿ (ಪ್ರಮುಖ) ವಿಷಯಗಳಲ್ಲಿ ಹಾಗೂ ಅಂತಿಮ ತೀರ್ಮಾನ ಮಂಜೂರಾತಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಟಿಪ್ಪಣಿಯಲ್ಲಿ ಶಿಫಾರಸ್ಸು ಮಾಡಿ ಜಿಲ್ಲಾಧಿಕಾರಿಯವರಿಗೆ ಸಲ್ಲಿಸುತ್ತಾರೆ. ಕಡತಗಳಲ್ಲಿ ತೀರ್ಮಾನ ಕೈಗೊಳ್ಳುವ ಬಗ್ಗೆ ಅನುಸರಿಸುವ ಕಾರ್ಯವಿಧಾನ ಕಛೇರಿ ಕೈಪಿಡಿಯ ನಿಯಮಗಳ ರೀತಿ ಕ್ರಮ ವಹಿಸಲಾಗುತ್ತದೆ.

ಅಧ್ಯಾಯ–5

ಕಲಂ 4(1) (b)(v)

ಕರ್ತವ್ಯಗಳನ್ನು ನಿರ್ವಹಿಸಲು ಇರುವ ಕಾಯ್ದೆಗಳು ನಿಯಮಗಳು, ಕಾನೂನುಗಳು, ಲಿಖಿತ ದಾಖಲೆಗಳ ವಿವರಗಳು.

ಈ ಕಛೇರಿಯ ಕರ್ತವ್ಯಗಳನ್ನು ಈ ಕೆಳಕಾಣಿಸಿದ ಕಾಯ್ದೆ ಮತ್ತು ಕಾನೂನುಗಳನ್ವಯ ನಿರ್ವಹಿಸಲಾಗುತ್ತಿದೆ.

ಜಿಲ್ಲಾಧಿಕಾರಿಯವರು ಹೊಂದಿರುವ ಅಧಿಕಾರದ ಕೇಂದ್ರಮಟ್ಟದ ಮುಖ್ಯ ಕಾಯ್ದೆಗಳ ಮತ್ತು ಕಾನೂನುಗಳ ವಿವರ:

1. ಇಂಡಿಯನ್ ಎಕ್ಸ್ ಪ್ಲೋಸಿವ್ ಆಕ್ಟ್ 1940.
2. ಇಂಡಿಯನ್ ಆರ್ಮ್ಸ್ ಆಕ್ಟ್ 1955.
3. ಇಂಡಿಯನ್ ಪೆಟ್ರೋಲಿಯಂ ಆಕ್ಟ್.
4. ಕರ್ನಾಟಕ ಸಿನಿಮಾ (ರೆಗ್ಯುಲೇಷನ್) ಆಕ್ಟ್, 1964.

5. ಕರ್ನಾಟಕ ಎಕ್ಸಿಬಿಷನ್ ಆಫ್ ಫಿಲಮ್ಸ್ ಅನ್ ರಿಸ್ಕೀನ್ ಥ್ರೂ ವಿ.ಸಿ.ಆರ್.(ರೆಗ್ಯುಲೇಷನ್) ಆಕ್ಟ್,1984.
6. ಕರ್ನಾಟಕ ಇರಿಗೇಷನ್ ಆಕ್ಟ್, 1965.
7. ಕರ್ನಾಟಕ ರೆಂಟ್ ಕಂಟ್ರೋಲ್ ಆಕ್ಟ್, 1961.
8. ಕರ್ನಾಟಕ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್, 1961.
9. ಕರ್ನಾಟಕ ಲ್ಯಾಂಡ್ ಗ್ರಾಂಟ್ಸ್ ರೂಲ್ಸ್, 1969.
10. ಕರ್ನಾಟಕ ಮುನ್ಸಿಪಾಲಿಟಿ ಆಕ್ಟ್, 1964.
11. ನ್ಯಾಷನಲ್ ಡಿಜಾಸ್ಟರ್ ಮ್ಯಾನೇಜ್‌ಮೆಂಟ್ ಆಥಾರಿಟಿ ಆಕ್ಟ್.
12. ಕರ್ನಾಟಕ ಇನಾಮ್ಸ್ ಅಂಡ್ ಸರ್ಟೈನ್ ಲ್ಯಾಂಡ್ಸ ಅಬಾಲಿಷನ್ ಆಕ್ಟ್, (1954,1955,1977)
13. ಕರ್ನಾಟಕ ಎಸ್ಸಿ/ಎಸ್ಟಿ & ಒ.ಬಿ.ಸಿ. (ಅಪಾಯಿಂಟ್ ಮೆಂಟ್, ರಿಜರ್ ವೇಷನ್ ಆಕ್ಟ್) ಅಮೆಂಡಮೆಂಟ್ ಆಕ್ಟ್ 1993.
14. ಕರ್ನಾಟಕ ಲ್ಯಾಂಡ್ ಅಕ್ವಿಜಷನ್ ಆಕ್ಟ್ XVIII ಆಪ್ 1993.
15. ಕರ್ನಾಟಕ ಸಿವಿಲ್ ಸರ್ವೀಸ್ (ಸಿಸಿ & ಎ) ರೂಲ್ಸ್ 1957.
16. ಕರ್ನಾಟಕ ಹಿಂದೂ ರಿಲಿಜಿಯಸ್ ಇನ್ಸ್ ಸ್ಟಿಟ್ಯೂಷನ್ ಅಂಡ್ ಎಂಡೋಮೆಂಟ್ ಆಕ್ಟ್ 1957.
17. ಕರ್ನಾಟಕ ಟ್ರಜರ್ ಟ್ರೋವ್ ಆಕ್ಟ್, 1962.
18. ಕರ್ನಾಟಕ ಸ್ಟಾಂಪ್ಸ್ ಆಕ್ಟ್, 1957.
19. ಕರ್ನಾಟಕ ಜಡ್‌ಪಿ, ಟಿ.ಪಿ & ವಿ.ಪಿ ಆಕ್ಟ್ 1993.
20. ಕರ್ನಾಟಕ ಅಗ್ರಿಕಲ್ಚರ್ ಕ್ರೆಡಿಟ್ ಅಪರೇಷನ್ಸ್ & ಮಿಸಲೇನಿಯಸ್ ಪ್ರಾವಿಜನ್ ಆಕ್ಟ್ 1974.
21. ಮೋಟಾರ್ ವೆಹಿಕಲ್ಸ್ ಆಕ್ಟ್ (ಆರ್.ಟಿ.ಎ. ಮ್ಯಾಟರ್ಸ್).
22. ರಿಜಿಸ್ಟ್ರೇಷನ್ ಆಕ್ಟ್.
23. ರಿಜಿಸ್ಟ್ರೇಷನ್ ಅಫ್ ಸೊಸೈಟೀಸ್ ಆಕ್ಟ್.
24. ಕರ್ನಾಟಕ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿ ಆಕ್ಟ್.
25. ಕ್ರಿಮಿನಲ್ ಪ್ರೊಸೀಜರ್ ಕೋಡ್.
26. ಕರ್ನಾಟಕ ಷೆಡ್ಯೂಲ್ ಕ್ಯಾಸ್ಟ್ ಅಂಡ್ ಷೆಡ್ಯೂಲ್ಡ್ ಟ್ರೈಬ್ (ಕೆಲವೊಂದು ಜಮೀನುಗಳ ಪರಬಾರೆ ನಿಷೇದ) ಆಕ್ಟ್ 1978.
27. ಇಂಡಿಯನ್ ಪಾರ್ಟ್‌ನರ್ ಶಿಫ್ ಆಕ್ಟ್ 1932.
28. ಕರ್ನಾಟಕ ನೀರಾವರಿ ಕಾಯ್ದೆ 1965
29. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997
30. ಮೈಸೂರು (ವೈಯಕ್ತಿಕ ಮತ್ತು ಇತರೆ) ಇನಾಂ ರದ್ದಿಯಾತಿ ಕಾಯ್ದೆ 1954
31. ಮೈಸೂರು (ಧಾರ್ಮಿಕ ಮತ್ತು ದತ್ತಿ) ಇನಾಂ ರದ್ದಿಯಾತಿ ಕಾಯ್ದೆ 1955
32. ಕರ್ನಾಟಕ ಗ್ರಾಮಾಧಿಕಾರಿಗಳ ರದ್ದತಿ ಕಾಯ್ದೆ 1963
33. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ಮತ್ತು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳ, ಧಾರ್ಮಾದಾಯ ದತ್ತಿಗಳ ನಿಯಮಗಳು 2000
34. ಕರ್ನಾಟಕ ಪ್ರದೇಶಗಳಲ್ಲಿ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ ಅಧಿನಿಯಮ 1991
35. ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957
36. ಕರ್ನಾಟಕ ನಾಗರಿಕ ಸೇವಾ (ವಾರ್ಷಿಕ ಕಾರ್ಯನಿರ್ವಹಣಾ) ನಿಯಮಾವಳಿ 2003
37. ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳು
38. ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966
39. ಕರ್ನಾಟಕ ನಾಗರಿಕ ಸೇವಾ (ವೇತನ, ಪದೋನ್ನತಿ ಮತ್ತು ಪಿಂಚಣಿ) ಕಾಯ್ದೆ 1974
40. ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರಿತ) ನೇಮಕಾತಿ ನಿಯಮಗಳು 1996

41. ಕಛೇರಿ ಕಾರ್ಯ ವಿಧಾನ ಕೈಪಿಡಿ
42. ಕರ್ನಾಟಕ ಸರ್ಕಾರಿ (ಸಾಮಾನ್ಯ ಭವಿಷ್ಯ ನಿಧಿ) ನಿಯಮಾವಳಿ 1957
43. ಕರ್ನಾಟಕ ನಾಗರಿಕ (ಅಸಾಧಾರಣ ನಿವೃತ್ತಿ ವೇತನ) ನಿಯಮಗಳು 2003
44. ಕರ್ನಾಟಕ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಾವಳಿಗಳು 2002
45. ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ 1976
46. ಕರ್ನಾಟಕ ಮುನಿಸಿಪಾಲಿಟಿ ಕಾಯ್ದೆ 1964
47. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000
48. ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್, ಕರ್ನಾಟಕ ಸ್ಟಾಂಪ್ ಆಕ್ಟ್ 1957
49. ಮಾಹಿತಿ ಪಡೆಯುವ ಹಕ್ಕು ಅಧಿನಿಯಮ 2005
50. ಜನಗಣತಿ ಅಧಿನಿಯಮ 1948
51. ಪ್ರಜಾಪ್ರತಿನಿಧಿ ಕಾಯ್ದೆ 1951
52. ಮತದಾರರ ನೋಂದಣಿ ನಿಯಮ 1960
53. ಚುನಾವಣೆ ನಡೆಸುವ ನಿಯಮಗಳು 1961
54. ಕರ್ನಾಟಕ ಆರ್ಥಿಕ ಸಂಹಿತೆ
55. ಮ್ಯಾನ್ಯುಯಲ್ ಕಂಟನ್‌ಜೆನ್ಸಿ ಎಕ್ಸ್‌ಪೆಂಡಿಚರ್
56. ಸಾದಿಲ್ವಾರು ವೆಚ್ಚದ ಮ್ಯಾನ್ಯುಯಲ್
57. ಕರ್ನಾಟಕ ಸರ್ಕಾರಿ ನೌಕರ (ವೈದ್ಯಕೀಯ ವೆಚ್ಚ ಮರುಪಾವತಿ) ನಿಯಮ 1963
58. ಕರ್ನಾಟಕ ನಾಗರಿಕ ಸೇವಾ ನಿಯಮ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977
59. ಕರ್ನಾಟಕ ನಾಗರಿಕ ಸೇವಾ ನಿಯಮ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು 1974
60. ಕರ್ನಾಟಕ ನಾಗರಿಕ ಸೇವಾ ನಿಯಮ (ಪ್ರೊಬೇಷನರಿ) ನಿಯಮಗಳು 1977
61. ಕರ್ನಾಟಕ ಖಜಾನೆ ಸಂಹಿತೆ
62. ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ವಿಮಾ ಯೋಜನೆ) ನಿಯಮಾವಳಿ 1958

ಜಿಲ್ಲಾಧಿಕಾರಿಯವರು ಇತರೆ ವಿಷಯಗಳ ಜೊತೆಗೆ ಕೆಳಕಾಣಿಸಿದ ಪ್ರಮುಖ ಅಧಿನಿಯಮಗಳ ಮೇಲೆ ಕ್ರಮ ಜರುಗಿಸುತ್ತಾರೆ:

1) ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಇನ್ನಿತರೆ ಮೆಜಿಸ್ಟೀರಿಯಲ್ ವಿಚಾರಗಳು
2) ಎಲ್ಲಾ ಸಿಬ್ಬಂಧಿ ವಿಷಯಗಳು (ನೇಮಕಾತಿ ಮತ್ತು ವರ್ಗಾವಣೆ ಇತ್ಯಾದಿ)
3) ಅಬ್ಕಾರಿ ಮತ್ತು ನಿಷೇದ ಸಂಬಂಧಿಸಿದ ವಿಚಾರಗಳು
4) ಚುನಾವಣೆಗಳು ಮತ್ತು ರಾಷ್ಟ್ರೀಯತೆ ವಿಚಾರಗಳು
5) ಮುನ್ಸಿಫಲ್ ಅಡ್‌ಮಿನಿಸ್ಟ್ರೇಷನ್‌ಗೆ ಸಂಬಂಧಿಸಿದ ವಿಚಾರಗಳು
6) ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ಅತ್ಯಾವಶ್ಯಕ ವಸ್ತುಗಳಿಗೆ ಸಂಬಂಧಿಸಿದ ವಿಚಾರಗಳು
7) ಗಣ್ಯವ್ಯಕ್ತಿಗಳ ಸಂದರ್ಶನ
8) ಕರ್ನಾಟಕ ಭೂಮಂಜೂರಾತಿ ನಿಯಮಾವಳಿ ಯಡಿ ಭೂ ಮಂಜೂರಾತಿಗೆ ಸಂಬಂಧಿಸಿದ ವಿಚಾರಗಳು
9) ಕರ್ನಾಟಕ ಭೂಸುಧಾರಣಾ ಕಾಯ್ದೆ ಮತ್ತು ನಿಯಮಾವಳಿ ಅಡಿ ಸಂಬಂಧಿಸಿದ ವಿಚಾರಗಳು

1. ಭೂಮಿ ಮತ್ತು ಭೂ ಕಂದಾಯ ಸರ್ಕಾರಿ ಬಾಕಿ ವಸೂಲಾತಿ ಸೇರಿದಂತೆ
2. ಭೂಸ್ವಾದೀನಕ್ಕೆ ಸಂಬಂಧಿಸಿದ ವಿಚಾರಗಳು
3. ಎಲ್ಲಾ ವಿಚಾರಗಳಿಗೆ ಸಂಬಂಧಿಸಿದ
   ಅ) ಸ್ಟಾಂಪ್ ಮತ್ತು ರಿಜಿಸ್ಟ್ರೇಶನ
   ಬಿ) ಸಂಘಗಳ ನೋಂದಣಿ ಕಾಯ್ದೆ 1960
   ಸಿ) ಇಂಡಿಯನ್ ಪಾರ್ಟನರ್ ಶಿಪ್ ಅಕ್ಟ್ 1932ರಡಿ ಸಂಘಗಳ ನೋಂದಣಿ
4. ಧಾರ್ಮಿಕ ದತ್ತಿಗೆ ಸಂಬಂಧಿಸಿದ ಎಲ್ಲಾ ವಿಚಾರಗಳು
5. ವ್ಯವಸಾಯದ ಗಣತಿ ಕಾರ್ಯ
6. ಅರಣ್ಯಕ್ಕೆ ಸಂಬಂಧಿಸಿದ ವಿಚಾರಗಳು
7. ಮನೆ ಬಾಡಿಗೆ ಮತ್ತು ವಸತಿಗೆ ಸಂಬಂಧಿಸಿದ ವಿಚಾರಗಳು

10) ಇನಾಂ ಅಬಾಲಿಷನ್ ಕಾಯ್ದೆ ಮತ್ತು ನಿಯಮಾವಳಿ ಅಡಿ ಸಂಬಂಧಿಸಿದ ವಿಚಾರಗಳು

11) ನೈಸರ್ಗಿಕ ವಿಕೋಪಗಳು ಮತ್ತು ಪರಿಹಾರಗಳು

12) ವಿವಿಧ ಯೋಜನೆಗಳಲ್ಲಿ ಅನಾಥರಾದ / ವಲಸೆ ಬಂದವರಿಗೆ ಪುನರ್ವಸತಿ ಸೌಲಭ್ಯ

13) ಪ್ರಾದೇಶಿಕ ಸಾರಿಗೆ ನಿಯಂತ್ರಣ

14) ಗಣತಿಗಳು

15) ಆಡಳಿತಕ್ಕೆ ಸಂಬಂಧಿಸಿದ ವರದಿಗಳು

8. ನೀರಾವರಿಗೆ ಸಂಬಂಧಿಸಿದ ವಿಚಾರಗಳು

9. ಕೆಳಕಂಡ ಕಾಯ್ದೆಗಳಿಗೆ ಸಂಬಂಧಿಸಿದಂತೆ:

(i) ಲ್ಯಾಂಡ್ ಇಂಪ್ರೋವ್ ಮೆಂಟ್ ಲೋನ್ಸ್ ಆಕ್ಟ್ 1963.

(ii) ಅಗ್ರಿಕಲ್ಚರಿಸ್ಟ್ ಲೋನ್ಸ್ ಆಕ್ಟ್ 1963

(iii) ನಾನ್ ಅಗ್ರಿಕಲ್ಚರಿಸ್ಟ್ ಲೋನ್ಸ್ ಆಕ್ಟ್ 1958

10. ಪ್ರಿವೆನ್ಷನ್ ಅಫ್ ಪ್ರಾಗ್ ಮೆಂಟೇಷನ್ & ಕನ್ ಸಾಲಿಡೇಷನ್ ಆಫ್ ಹೋಲ್ಡಿಂಗ್ಸ್

11. ಕೆಳಕಂಡ ವಿಚಾರಗಳಿಗೆ ಸಂಬಂಧಿಸಿದ:–

(i) ನಗರ ಭೂಪರಿಮಿತಿ (ಸೀಲಿಂಗ & ರೆಗ್ಯುಲೇಷನ್) ಬೆಂಗಳೂರು ಅರ್ಬನ್ ಅಗ್ಲೋಮರೇಷನ್ ಹೊರತುಪಡಿಸಿ.

(ii) ಪ್ರೊಹಿಬಿಷನ್ ಅಫ್ ಅಲಿನೇಷನ್ ಆಕ್ಟ್ 1975 ನಗರ ಪ್ರದೇಶದ ಖಾಲಿ ಜಮೀನುಗಳ ಬಗ್ಗೆ.

ಜಿಲ್ಲಾಧಿಕಾರಿಯವರು ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆ/ನಿಯಮಗಳ ವಿವರ:

1. ಕರ್ನಾಟಕ ಭೂಕಂದಾಯ ಕಾಯ್ದೆ 1964 ಮತ್ತು ನಿಯಮಗಳು 1966.
2. ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969.
3. ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961 ಹಾಗೂ ನಿಯಮಗಳು 1974.
4. ಕರ್ನಾಟಕ ಭೂ ಸ್ವಾದೀನ ಕಾಯ್ದೆ 1894.
5. ಕರ್ನಾಟಕ ಮನೆ ನಿವೇಶನಗಳ ಮಂಜೂರಾತಿಗಾಗಿ ಭೂಸ್ವಾದೀನ ಅಧಿನಿಯಮ 1972.
6. ಕರ್ನಾಟಕ ಗ್ರಾಮ ರದ್ದಿಯಾತಿ ಕಾಯ್ದೆ.
7. ಕರ್ನಾಟಕ ಮರಗಳ ಸಂರಕ್ಷಣಾ ಕಾಯ್ದೆ ಮತ್ತು ನಿಯಮ 1977.
8. ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯಿದೆ 1977.

ಉಪವಿಭಾಗ ಮಟ್ಟದ ಉಪ ವಿಭಾಗಾದಿಕಾರಿ ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆಗಳ ಮತ್ತು ನಿಯಮಗಳ ವಿವರ:

1. ಕರ್ನಾಟಕ ಭೂಕಂದಾಯ ಕಾಯ್ದೆ 1964 ಮತ್ತು ನಿಯಮಗಳು 1966.
2. ಕರ್ನಾಟಕ ಭೂಸುಧಾರಣಾ ಕಾಯ್ದೆ 1961 ಹಾಗೂ ನಿಯಮಗಳು 1974.
3. ಕರ್ನಾಟಕ ಭೂ ಸ್ವಾದೀನ ಕಾಯ್ದೆ 1894.
4. ಕರ್ನಾಟಕ ಮುದ್ರಾಂಕ ಅಧಿನಿಯಮ 1967 ಮತ್ತು ನಿಯಮಗಳು.
5. ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು (ಕೆಲವು ಜಮೀನುಗಳ ಪರಭಾರೆ ನಿಷೇಧ) ಅಧಿನಿಯಮ 1978.
6. ಕರ್ನಾಟಕ ಕೆ.ಸಿ.ಎಸ್. ವೃಂದ ಮತ್ತು ನೇಮಕಾತಿ, ಗ್ರಾಮಲೆಕ್ಕಾಧಿಕಾರಿಗಳ ನೇಮಕಾತಿ ನಿಯಮಗಳು.
7. ಕಂದಾಯ ವಸೂಲಿ ಕಾಯ್ದೆ.
8. ಪತ್ರಿಕಾ ಮತ್ತು ನೋಂದಣಿ ಅಧಿನಿಯಮ 1867.
9. ಜೀತದಾಳು ನಿರ್ಮೂಲನಾ ಕಾಯ್ದೆ.
10. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ (ದೌರ್ಜನ್ಯ ನಿಷೇದ) ಅಧಿನಿಯಮ 1989.
11. ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ,ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957.
12. ದಂಡ ಪ್ರಕ್ರಿಯೆ ಸಂಹಿತೆ 1908.

ತಾಲ್ಲೂಕು ಮಟ್ಟದ ತಹಶೀಲ್ದಾರ್ ಹೊಂದಿರುವ ಅಧಿಕಾರದ ಮುಖ್ಯ ಕಾಯ್ದೆಗಳ ಮತ್ತು ನಿಯಮಗಳ ವಿವರ:

1. ಕರ್ನಾಟಕ ಭೂ ಸುಧಾರಣಾ ಅಧಿನಿಯಮ 1961 ಮತ್ತು ನಿಯಮಗಳು 1974.
2. ಕರ್ನಾಟಕ ಇನಾಂ ರದ್ದಿಯಾತಿ ಅಧಿನಿಯಮ 1977.
3. ಕರ್ನಾಟಕ ಗ್ರಾಮ ನೌಕರಿಗಳ ರದ್ದತಿ ಅಧಿನಿಯಮ 1961.
4. ಕರ್ನಾಟಕ ಪುರಸಭೆಗಳ ಅಧಿನಿಯಮ 1964.
5. ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಇತರೆ ಉಪಬಂಧಗಳ ಅಧಿನಿಯಮ 1974 ಮತ್ತು ನಿಯಮಗಳು 1975.
6. ಕರ್ನಾಟಕ ವೃದ್ಧಾಪ್ಯವೇತನ ನಿಯಮಗಳು.
7. ನಿರ್ಗತಿಕ ವಿಧವಾ ವೇತನ ನಿಯಮಗಳು 1984.
8. ದೈಹಿಕ ಅಂಗವಿಕಲರಿಗೆ ನಿರ್ವಹಣಾ ಭತ್ಯೆ ಮಂಜೂರಿ ನಿಯಮಗಳು 1957.
9. ಕರ್ನಾಟಕ ಋಣ ವಿಮೋಚನಾ ಅಧಿನಿಯಮ 1976.
10. ಮತದಾರರ ನೋಂದಣಿ ನಿಯಮಗಳು 1960.
11. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ಅಧಿನಿಯಮ 1966.
12. ಕರ್ನಾಟಕ ನೀರಾವರಿ ಅಧಿನಿಯಮ 1965.
13. ಕರ್ನಾಟಕ ನೀರಾವರಿ (ನೀರಿನ ಕರ ಅಕರಣೆ)ನಿಯಮಗಳು 1965.
14. ಕರ್ನಾಟಕ ಅರಣ್ಯ ನಿಯಮಗಳು 1969.
15. ಉದ್ದಿಮೆಗಳಿಗೆ ಕರ್ನಾಟಕ ರಾಜ್ಯದ ನೆರವು ನಿಯಮಗಳು 1966.
16. ಕರ್ನಾಟಕ ಜಾನುವಾರು ಅತಿಕ್ರಮ ಪ್ರವೇಶ ಅಧಿನಿಯಮ 1966.
17. ಏಲಕ್ಕಿ ಅಧಿನಿಯಮ 1965.
18. ಕರ್ನಾಟಕ ಸಾರ್ವಜನಿಕ ಆವರಣಗಳ ಅಧಿನಿಯಮ 1974 ಮತ್ತು ಅದರಡಿಯ ನಿಯಮಾವಳಿ.

ದಂಡಾಧಿಕಾರಿಯಾಗಿ ತಹಶೀಲ್ದಾರ್‌ರು ಈ ಕೆಳಗಿನ ಕಾಯ್ದೆಗಳಡಿಯಲ್ಲಿ ಅಧಿಕಾರ ಹಾಗೂ ಕರ್ತವ್ಯಗಳನ್ನು ಹೊಂದಿರುತ್ತಾರೆ:

1. ದಂಡ ಪ್ರಕಿಯೆ ಸಂಹಿತೆ 1974.
2. ಭಾರತ ಸಾಕ್ಷ್ಯ ಅಧಿನಿಯಮ 1963.
3. ಕರ್ನಾಟಕ ಪೋಲಿಸ್ ಅಧಿನಿಯಮ 1963.
4. ಜೀತದಾಳು ಪದ್ದತಿ (ನಿರ್ಮೂಲನಾ) ಅಧಿನಿಯಮ 1976.
5. ಪ್ರಮಾಣವಚನ ಅಧಿನಿಯಮ 1999.
6. ಭಾರತೀಯ ಮುದ್ರಾಂಕ ಅಧಿನಿಯಮ 1899.
7. ಭಾರತೀಯ ತಂತಿ ಅಧಿನಿಯಮ 1985.
8. ನ್ಯಾಯಾಧೀಶರ (ರಕ್ಷಣೆ) ಅಧಿನಿಯಮ 1965.
9. ಪ್ರಾಣಿಗಳಿಗೆ ಹಿಂಸೆ ಅಧಿನಿಯಮ 1960.
10. ಕರ್ನಾಟಕ ಭಿಕ್ಷಾಟನಾ ಅಧಿನಿಯಮ 1975.
11. ಸಾರ್ವಜನಿಕ ಆರೋಗ್ಯ ಅಧಿನಿಯಮ 1944.
12. ಕರ್ನಾಟಕ ಮಾರಾಟ ಕರ ಅಧಿನಿಯಮ 1957.
13. ನ್ಯಾಯವಾದಿಗಳ ಅಧಿನಿಯಮ 1957.
14. ವಿದ್ಯುಚ್ಛಕ್ತಿ ಅಧಿನಿಯಮ 1910.
15. ಸತಿ ಹೋಗುವ (ನಿಷೇಧ) ಅಧಿನಿಯಮ 1987.
16. ನ್ಯಾಯಾಲಯಗಳ ನಿಂದನಾ ಅಧಿನಿಯಮ 1971.
17. ಕೈದಿಗಳನ್ನು ಗುರುತಿಸುವ ಅಧಿನಿಯಮ 1929.
18. ಪ.ಜಾತಿ/ಪ.ವರ್ಗಗಳ (ದೌರ್ಜನ್ಯ ನಿಷೇಧ) ಅಧಿನಿಯಮ 1989.
19. ಕರ್ನಾಟಕ ಆಹಾರ ಮತ್ತು ನಾಗರೀಕ ಸೇವಾ ಅಧಿನಿಯಮ.
20. ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಜೀರ್ಣೋದ್ಧಾರ.

ಅಧ್ಯಾಯ–6

ಕಲಂ 4(1) (b) (vi)

ಜಿಲ್ಲಾ ಘಟಕ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ದಾಸ್ತಾವೇಜುಗಳ ಪ್ರವರ್ಗಗಳ ಪಟ್ಟಿ:

ಜಿಲ್ಲಾಧಿಕಾರಿಯವರ ಘಟಕದಲ್ಲಿ ಮೇಲೆ ರೂಪಿಸಲಾದ ಕಾಯ್ದೆ/ನಿಯಮಗಳಡಿ ನಿರ್ವಹಿಸುವ ಎಲ್ಲಾ ಕಡತಗಳಲ್ಲಿ ಅಂತಿಮ ಆದೇಶ ನೀಡಿ ಮುಕ್ತಾಯವಾದ ನಂತರ ಪ್ರತಿ ಕಡತಗಳ ಪ್ರಾಮುಖ್ಯತೆಯನ್ನುಸರಿಸಿ ಪ್ರವರ್ಗ 'ಎ' 'ಬಿ' 'ಸಿ' 'ಡಿ' ಮತ್ತು 'ಇ' ಎಂದು ವರ್ಗೀಕರಿಸಿ ನಿರ್ವಹಿಸಲಾಗುತ್ತಿದೆ. ಪ್ರತಿ ವರ್ಗೀಕರಣದ ಅವಧಿ ಕೆಳಕಂಡಂತಿರುತ್ತದೆ.

'ಎ' ಡಿಸ್	ಶಾಶ್ವತ
'ಬಿ' ಡಿಸ್	30ವರ್ಷಗಳು
'ಸಿ' ಡಿಸ್	10ವರ್ಷಗಳು
'ಡಿ' ಡಿಸ್	5ವರ್ಷಗಳು
'ಇ' ಡಿಸ್	1ವರ್ಷ

ಇದರಲ್ಲಿ ಬರುವ ಎಲ್ಲಾ ಕಡತಗಳು ಮತ್ತು ಕಛೇರಿ ಕಾರ್ಯಗಳಿಗಾಗಿ ಬಳಸಲಾಗುತ್ತಿರುವ ವಿವಿಧ ರೀತಿಯ ವಹಿಗಳು, ತಃಖ್ತೆಗಳು, ಮಾಹಿತಿಗಳು, ನಿಯತಕಾಲಿಕಗಳು, ಸೇವಾ ವಹಿಗಳು, ನಿರ್ವಹಿಸುತ್ತಿರುವ ಕಡತಗಳು, ಅಂಕಿ–ಅಂಶ ವಹಿ, ಪೀಠೋಪಕರಣ ವಹಿ, ಗ್ರಂಥಾಲಯ ವಹಿ ಮುಂತಾದವುಗಳು.

ಅಧ್ಯಾಯ–7

ಕಲಂ 4(1) (b)(vii)

ಕಾರ್ಯನೀತಿಯ ರಚನೆ ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಯ ವಿವರಗಳು.

1. ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು
2. ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲಿಸಲು ಸಭೆಗಳನ್ನು ಏರ್ಪಡಿಸುವುದು
3. ಸಾರ್ವಜನಿಕ ಕುಂದುಕೊರತೆ ಆಲಿಸುವ ದಿನ
4. ಪಾರದರ್ಶಕ ಕಾಯಿದೆ ಅನುಷ್ಠಾನ
5. ದಲಿತರ ಬೇಡಿಕೆಗಳ ಇತ್ಯರ್ಥಗೊಳಿಸುವ ಸಭೆ
6. ಇತರೆ ಎಲ್ಲಾ ವರ್ಗದ ಜನರಿಂದ ಸ್ವೀಕರಿಸುವಂತಹ ಅಹವಾಲುಗಳು
7. ಪ್ರಕೃತಿ ವಿಕೋಪ
8. ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 94 ಸಿ ಅನುಸಾರ ಸ್ವೀಕರಿಸಿರುವ ಅರ್ಜಿಗಳ ವಿಲೇವಾರಿ
9. ಎಂ.ಪಿ.ಲ್ಯಾಡ್ಸ್/ಕೆ.ಎಲ್.ಎ.ಡಿ.
10. ಗಡಿ ಪ್ರದೇಶಾಭಿವೃದ್ಧಿ

ಅಧ್ಯಾಯ–8

ಕಲಂ 4(1) (b)(viii)

ಮಂಡಳಿಗಳು, ಪರಿಷತ್ತುಗಳು, ಸಮಿತಿಗಳು ಅಥವಾ ಇತರ ನಿಕಾಯಗಳು ಮತ್ತು ಅದರ ಭಾಗವಾಗಿ ಅಥವಾ ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ, ಪರಿಷತ್ತುಗಳ, ಸಮಿತಿಗಳ ಮತ್ತು ಇತರ ನಿಕಾಯಗಳ ಸಭೆಗಳು ಸಾರ್ವಜನಿಕರಿಗೆ ಮುಕ್ತವಾಗಿರುತ್ತವೆಯೇ ಅಥವಾ ಅಂತಹ ಸಭೆಗಳ ನಡವಳಿಗಳು ಸಾರ್ವಜನಿಕರಿಗೆ ದೊರೆಯುತ್ತವೆಯೇ ಎಂಬುದರ ವಿವರ.

1. ಅಧೀನ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು:

ಜಿಲ್ಲಾ ಕಛೇರಿಯಿಂದ ಅಧೀನ ಕಛೇರಿಗಳಿಗೆ ವರದಿ ಪಡೆಯಲು ಸಂದರ್ಭಾನುಸಾರ ಕಾಲಮಿತಿಯನ್ನು ನಿಗದಿಪಡಿಸಲಾಗುತ್ತದೆ. ಹಾಗೂ ವರದಿ ಪಡೆದು ಸಾರ್ವಜನಿಕರಿಗೆ /ಸಂಘಟನೆಗಳ ಮುಖ್ಯಸ್ಥರಿಗೆ ಸಭೆ ಕರೆದು ವರದಿಯಲ್ಲಿನ ಅಂಶಗಳ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ.

2. ಇಲಾಖೆಯ ಪ್ರಕಾರ್ಯಗಳ ಪ್ರಗತಿ ಪರಿಶೀಲಿಸಲು ಸಭೆಗಳನ್ನು ಏರ್ಪಡಿಸುವುದು:

ಇಲಾಖೆಗೆ ಸಂಬಂಧಿಸದ ವಿಚಾರಗಳ ಬಗ್ಗೆ ಪ್ರಗತಿ ಸಾಧಿಸಲು ಕಾಲ ಕಾಲಕ್ಕೆ ಸಭೆಗಳನ್ನು ಕರೆಯಲಾಗುತ್ತದೆ. ಹಿಂದಿನ ಸಭೆಯ ನಿರ್ಣಯಗಳ ಪಾಲನೆ ಬಗ್ಗೆ ಪರಿಶೀಲಿಸುವುದಲ್ಲದೆ, ನಿಗಧಿತ ಗುರಿ ಸಾಧಿಸದಿರುವ ಬಗ್ಗೆ ಉಂಟಾಗಿರುವ ತೊಡಕುಗಳ ಬಗ್ಗೆ ಚರ್ಚಿಸಿ ಅಗತ್ಯವಾದ ನೆರವನ್ನು ಮತ್ತು ಸಲಹೆಯನ್ನು ನೀಡಲಾಗುತ್ತದೆ ಹಾಗೂ ಮುಂದಿನ ಸಭೆಯ ದಿನಾಂಕವನ್ನು ನಿಗದಿಪಡಿಸಿ, ಮುಂದಿನ ಸಭೆಯ ದಿನಾಂಕದೊಳಗೆ ಪ್ರಗತಿಯ ಮಾಹಿತಿಯನ್ನು ಸಲ್ಲಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗುತ್ತಿದೆ.

3. ಸಾರ್ವಜನಿಕ ಕುಂದು ಕೊರತೆ ಆಲಿಸುವ ದಿನ:

ಪ್ರತಿ ತಿಂಗಳು ಒಂದನೇ ಹಾಗೂ ಮೂರನೇ ಶನಿವಾರ ಸಾರ್ವಜನಿಕ ಕುಂದು ಕೊರತೆ ಆಲಿಸಲು ಸಾರ್ವಜನಿಕರಿಗೆ ಮುಕ್ತ ಪ್ರವೇಶ ಕಲ್ಪಿಸಲಾಗಿದೆ. ಸದರಿ ದಿನದಂದು ಎಲ್ಲಾ ಇಲಾಖಾಧಿಕಾರಿಗಳು ಸಭೆಯಲ್ಲಿ ಹಾಜರಿರುತ್ತಾರೆ. ಸ್ಥಳದಲ್ಲಿಯೇ ಅರ್ಜಿದಾರರಿಂದ ಮನವಿ ಸ್ವೀಕರಿಸಿ, ನಿಯಮಾನುಸಾರ ಪರಿಶೀಲಿಸಿ ಶೇ.90ರಷ್ಟು ಪರಿಹಾರವನ್ನು ಸ್ಥಳದಲ್ಲಿಯೇ ಕೈಗೊಳ್ಳಲಾಗುತ್ತದೆ. ಉಳಿದ ಪ್ರಕರಣಗಳಲ್ಲಿ ಕ್ರಮ ಜರುಗಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿ ಮುಂದಿನ ಸಭೆಯಲ್ಲಿ ತೆಗೆದುಕೊಂಡ ಕ್ರಮವನ್ನು ಅರ್ಜಿದಾರರಿಗೆ ತಿಳಿಸುವ ವ್ಯವಸ್ಥೆಯನ್ನು ನೀಡಲಾಗಿದೆ.

4. ಪಾರದರ್ಶಕ ಕಾಯ್ದೆ:

ಕರ್ನಾಟಕ ಸಾರ್ವಜನಿಕ ಸಂಗ್ರಹಗಳಲ್ಲಿ ಪಾರದರ್ಶಕತೆ ಅಧ್ಯಾದೇಶ–2000, ದಿನಾಂಕ: 04.10.2000 ರಿಂದ ಹಾಗೂ ನಿಯಮ 24.10.2000ರಿಂದ ಜಾರಿಗೆ ಬಂದಿರುತ್ತದೆ.

ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಕ್ರಿಯೆಗೊಳಪಡಿಸುವ ಮತ್ತು ಅಂಗೀಕರಿಸುವ ಕಾರ್ಯವಿಧಾನವನ್ನು ಸರಳಗೊಳಿಸುವ ಮೂಲಕ ಸಂಗ್ರಹಣಾ ಸಂಸ್ಥೆಗಳು ಸರಕುಗಳ ಹಾಗೂ ಸೇವೆಗಳ ಸಂಗ್ರಹಣಾ ಪ್ರಕ್ರಿಯೆಯನ್ನು ಪಾರದರ್ಶಕಗೊಳಿಸುವ ಉದ್ದೇಶದಿಂದ ಸದರಿ ನಿಯಮಗಳನ್ನು ಸರ್ಕಾರವು ಅಧ್ಯಾದೇಶದ ಮೂಲಕ ಜಾರಿಗೆ ತಂದಿರುತ್ತದೆ.

ಸದರಿ ನಿಯಮದನ್ವಯ ಯಾವುದೇ ಸರ್ಕಾರಿ ಇಲಾಖೆ, ರಾಜ್ಯ ಸರ್ಕಾರಿ ಉದ್ಯಮ, ಸ್ಥಳೀಯ ಪ್ರಾಧಿಕಾರ ಅಥವಾ ಯಾವುದೇ ಕಾನೂನಿನಡಿಯಲ್ಲಿ ಸ್ಥಾಪಿತವಾದ ಮತ್ತು ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಮಂಡಳಿ, ನಿಗಮ ಮತ್ತು ಪ್ರಾಧಿಕಾರಗಳು ಈ ಅಧ್ಯಾದೇಶದ ವ್ಯಾಪ್ತಿಗೆ ಒಳಪಡುತ್ತದೆ. ಸದರಿ ನಿಯಮದನ್ವಯ ಸಂಗ್ರಹಣೆ ಮಾಡುವ ಸರಕು ಹಾಗೂ ಸೇವೆಗಳು ರೂ.5ಲಕ್ಷಕ್ಕಿಂತ (ಐದುಲಕ್ಷ) ಹೆಚ್ಚಿಗೆ ಇದ್ದಲ್ಲಿ, ಅಧ್ಯಾದೇಶದ ಕ್ಲಾಸ್ 4ರಂತೆ ಟೆಂಡರ್ ಕರೆಯಬೇಕಾಗಿರುತ್ತದೆ.

ಈ ಕೆಳಕಾಣಿಸಿದ ಸಂದರ್ಭಗಳಲ್ಲಿ ಈ ಪ್ರಕರಣಗಳಿಗೆ ಉಪಬಂಧಗಳು ಅನ್ವಯವಾಗುವುದಿಲ್ಲ:

1) ಪ್ರಕೃತಿ ವಿಕೋಪಗಳ ಹಾಗೂ ಸರ್ಕಾರವು ಘೋಷಿಸಿದ ತುರ್ತು ಪರಿಸ್ಥಿತಿಯ ಅವಧಿಯಲ್ಲಿ

2) ಸರಕುಗಳು ಅಥವಾ ಸೇವೆಗಳು ಏಕೈಕ ಮೂಲದಿಂದ ಲಭ್ಯವಾಗುತ್ತಿದ್ದಲ್ಲಿ

3) ಮೂರು ತಜ್ಞರ ಸಮಿತಿ ಪರಿಶೀಲಿಸತಕ್ಕದ್ದು

4) ಸರ್ಕಾರದ ಇಲಾಖೆಗಳು ಸಂಗ್ರಹಣೆ ಮಾಡಿಕೊಳ್ಳಬೇಕೆಂದು ಸರಕುಗಳ ಹಾಗೂ ಸೇವೆಗಳ ಮೌಲ್ಯವು ರೂ.1 ಲಕ್ಷ ಮೀರದಿದ್ದಲ್ಲಿ

ಅ) ಸಂಗ್ರಹಣಾ ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ

ಆ) ಸರ್ಕಾರಿ ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ

ಇ) ಪ್ರಸಿದ್ದವಾದ ಶೈಕ್ಷಣಿಕ ಅಥವಾ ಸಂಶೋಧನಾ ಸಂಸ್ಥೆ ಅಥವಾ ವಾಣಿಜ್ಯೇತರ ಸಂಸ್ಥೆಯ ಒಬ್ಬರು ಪ್ರತಿನಿಧಿ.

5) ಸ್ಥಳೀಯ ಪ್ರಾಧಿಕಾರವು ಕಿರು ಸರಬರಾಜು ಯೋಜನೆಯ ಅನುಷ್ಠಾನದ ಅಥವಾ ಶಾಲಾ ಕೊಠಡಿಗಳ ಉದ್ದೇಶಕ್ಕಾಗಿ ಸಂಗ್ರಹಣೆ ಮಾಡಿಕೊಳ್ಳಬೇಕಾದ ಸರಕುಗಳ ಅಥವಾ ಸೇವೆಗಳ ಮೌಲ್ಯವು ರೂ.2 ಲಕ್ಷ ಮೀರತಕ್ಕದ್ದಲ್ಲ ಹಾಗೂ ಇತರೆ ಉದ್ದೇಶಗಳಿಗೆ ರೂ.1 ಲಕ್ಷ ಮೀರತಕ್ಕದ್ದಲ್ಲ.

5. ದಲಿತರ ಬೇಡಿಕೆಗಳ ಇತ್ಯರ್ಥಗೊಳಿಸುವ ಸಭೆ:

ದಲಿತರ ಬೇಡಿಕೆಗಳ ಬಗ್ಗೆ ವಿವಿಧ ಸಂಘಟನೆಗಳು ಸರ್ಕಾರ ಮತ್ತು ಈ ಕಛೇರಿಗಳಿಗೆ ಸಲ್ಲಿಸುತ್ತಿರುವ ಮನವಿಗಳನ್ನು ಆಧರಿಸಿ ನಿಯಮಾನುಸಾರ ಅಧೀನಾಧಿಕಾರಿಗಳಿಂದ ಪರಿಶೀಲನಾ ವರದಿಯನ್ನು ಪಡೆದು ಈ ಕಛೇರಿಯಲ್ಲಿ ದಲಿತ ಮುಂಡರುಗಳೊಂದಿಗೆ ಚರ್ಚಿಸಲು ಸಭೆಯನ್ನು ಕರೆಯಲಾಗುತ್ತದೆ. ಕಾನೂನು ರೀತಿ ಕ್ರಮ ಕೈಗೊಂಡು, ತೆಗೆದುಕೊಂಡ ಕ್ರಮದ ವಿವರವನ್ನು ತಿಳಿಸಲಾಗುತ್ತಿದೆ.

6. ಇತರ ಎಲ್ಲಾ ವರ್ಗದ ಜನರಿಂದ ಸ್ವೀಕರಿಸುವಂತಹ ಅಹವಾಲುಗಳು:

ರೈತ ಸಂಘಟನೆಗಳು, ವಿದ್ಯಾರ್ಥಿಗಳ ಕುಂದುಕೊರತೆಗಳಲ್ಲದೆ ಇನ್ನಿತರ ಸಂಘಟನೆಗಳಿಂದ ನಡೆಸುವ ಪ್ರತಿಭಟನೆಗಳ ಅಹವಾಲುಗಳನ್ನು ಸ್ವೀಕರಿಸಿ ಸಂಬಂಧಿಸಿದವರಿಗೆ ರವಾನಿಸಿ ಮಾಹಿತಿ ಪಡೆದು ಪರಿಹಾರ ಒದಗಿಸುವುದಲ್ಲದೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲಾಗುತ್ತಿದೆ.

7. ಪ್ರಕೃತಿ ವಿಕೋಪ:

ನೈಸರ್ಗಿಕ ವಿಕೋಪಗಳಾದ ಅತಿವೃಷ್ಟಿ ಸೇರಿದಂತೆ ಎಲ್ಲಾ ವಿಕೋಪಗಳ ಬಗ್ಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತಿದೆ. ಅಲ್ಲದೆ ಸಾರ್ವಜನಿಕರಿಗೆ ಮಾಡಿಕೊಟ್ಟು ಸಹಾಯಪಡೆದು ತುರ್ತು ಸೇವಾ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಅವಶ್ಯವಿದ್ದಲ್ಲಿ ಸಂಕಷ್ಟದ ಮಾಹಿತಿ ಹಾಗೂ ತುರ್ತು ಪರಿಹಾರ ನೀಡಲು ಅಗತ್ಯ ಸೇವಾ ಸೌಲಭ್ಯ (ಹೆಲ್ಪ್ ಲೈನ್) ವ್ಯವಸ್ಥೆ ಮಾಡಲಾಗುತ್ತದೆ.

ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94 ಸಿ ಅನುಸಾರ ಸ್ವೀಕರಿಸಿರುವ ಅರ್ಜಿಗಳ ವಿಲೇವಾರಿ:–

ಸರ್ಕಾರಿ ಜಮೀನುಗಳಾದ ಸರ್ಕಾರಿ ಖರಾಬು ಮತ್ತು ಸರ್ಕಾರಿ ಗೋಮಾಳ ಎಂದು ವರ್ಗೀಕೃತಗೊಂಡ ಜಮೀನುಗಳಲ್ಲಿ ನಿರ್ಮಿಸಲಾದ ಅನಧಿಕೃತ ಮನೆಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ 94(ಸಿ) ಪ್ರಕಾರ ಜಮೀನಿನಲ್ಲಿ ದಿನಾಂಕ:14–04–1998ಕ್ಕಿಂತ ಮುಂಚಿತವಾಗಿ ಕಟ್ಟಿರುವ ಕಟ್ಟಡಗಳನ್ನು **ಕರ್ನಾಟಕ ಸ್ವಾಧೀನದಲ್ಲಿರುವ ಭೂಮಿಯಲ್ಲಿ ವಾಸದ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1969ರ ಪ್ರಕಾರ ಸರ್ಕಾರಿ ಭೂಮಿಯಲ್ಲಿ ನಿರ್ಮಿಸಿರುವ ಕಟ್ಟಡಗಳು / ವಾಸದ ಮನೆಗಳನ್ನು ಸಕ್ರಮೀಕರಿಸಲಾಗುವುದು. (ಅರಣ್ಯ, ಕೆರೆ ಅಂಗಳ, ಸ್ಮಶಾನ ಹೊರತುಪಡಿಸಿ)**

ನಗರ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶದ ರೂ.11,800–00ಗಳ ವಾರ್ಷಿಕ ಆದಾಯ ಮಿತಿಯೊಳಗಿರುವವರಿಗೆ ನಗರ ಪ್ರದೇಶದಲ್ಲಿ 30x40 ಅಡಿಗಳ ಅಳತೆಯಲ್ಲಿ ಕಟ್ಟಿರುವ ಮನೆಗಳನ್ನು ಮುಫತ್ತಾಗಿ ಸಕ್ರಮಗೊಳಿಸಲು ಅವಕಾಶವಿರುತ್ತದೆ.

ನಗರಸಭೆ ವ್ಯಾಪ್ತಿಯಲ್ಲಿರುವ ಕಟ್ಟಡಗಳಿಗೆ ಬಿ.ಡಿ.ಎ ನಿವೇಶನದ ಧರದಲ್ಲಿನ ಹಣವನ್ನು ಪಾವತಿಸಿಕೊಂಡು ಸಕ್ರಮಗೊಳಿಸಲಾಗುತ್ತದೆ. ಉಳಿದ ವ್ಯಾಪ್ತಿಯಲ್ಲಿ 30x40 ಅಡಿಗಳ ನಿವೇಶನಕ್ಕೆ ಚದರಡಿ 1ಕ್ಕೆ ರೂ. 1–00 ರಂತೆ 30x40 ಚದರಡಿ ನಿವೇಶನಕ್ಕೆ ರೂ.1–90 ಯಂತೆ, 30x40 ಚದರಡಿ ನಿವೇಶನಕ್ಕೆ ರೂ.2–80 ಯಂತೆ ಹಾಗೂ8–00 ಗುಂಟೆ ವಿಸ್ತೀರ್ಣದವರೆಗೆ ರೂ.3–00 ಯಂತೆ ಸಕ್ರಮಗೊಳಿಸಲು ಅವಕಾಶವಿರುತ್ತದೆ. ಸಾರ್ವಜನಿಕ ಹಿತಾಸಕ್ತಿಗೆ ತೊಂದರೆ ಇಲ್ಲದೆ ಇರುವುದನ್ನು ಖಚಿತಪಡಿಸಿಕೊಂಡು, ಸದರಿ ಜಮೀನುಗಳನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿಟ್ಟಿರುವುದನ್ನು ಕಾನೂನುಬದ್ಧವಾಗಿ ವಿಹಿತಗೊಳಿಸಿ ನಂತರ ಸಕ್ರಮ ಮಾಡುವ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆ.

ಮುನಿಸಿಪಲ್ ಕಾರ್ಪೋರೇಷನ್ ಪರಿಮಿತಿ ಮತ್ತು ಕಾರ್ಪೋರೇಷನ್ ಪರಿಮಿತಿಯಿಂದ 18 ಕಿ.ಮೀ. ದೂರದೊಳಗೆ ಇರುವ ಎಲ್ಲಾ ಸರ್ಕಾರಿ ಭೂಮಿಗಳ ಮತ್ತು ಅವರ ಅಧಿಕಾರಿ ವ್ಯಾಪ್ತಿಗೊಳಪಟ್ಟ ಇತರ ಸ್ಥಳಗಳಲ್ಲಿನ ಅಕ್ರಮ ವಾಸದ ಮನೆಗಳ ಸಕ್ರಮದ ಬಗ್ಗೆ ಮಂಜೂರಾತಿ ನೀಡುವ ಜಿಲ್ಲಾಧಿಕಾರಿ ಯವರಿಗೆ ನೀಡಲಾಗಿರುತ್ತದೆ.

ಎಂ.ಪಿ.ಲ್ಯಾಡ್ಸ್/ಕೆ.ಎಲ್.ಎ.ಡಿ:

ಲೋಕಸಭಾ ಮತ್ತು ವಿಧಾನಸಭಾ ಸದಸ್ಯರ ನಿಧಿಯಿಂದ ನಿಗಧಿಪಡಿಸಿರುವ ಅನುದಾನವನ್ನು ಸಂಬಂಧಿಸಿದ ಸಂಸದರ/ಶಾಸಕರ ಅನುಮತಿಯೊಂದಿಗೆ ಕ್ಷೇತ್ರಾಭಿವೃದ್ಧಿಪಡಿಸಲಾಗುತ್ತಿದೆ.

ಸಂಸತ್ ಸದಸ್ಯರ ಕ್ಷೇತ್ರಾಭಿವೃದ್ಧಿ ಯೋಜನೆ

ಭಾರತ ದೇಶದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ಲೋಕಸಭಾ ಹಾಗೂ ರಾಜ್ಯ ಸಭಾ ಸದಸ್ಯರುಗಳಿಗೆ ತಲಾ ಎರಡು ಕಂತುಗಳಲ್ಲಿ ರೂ.200.00ಲಕ್ಷ ಅನುದಾನವನ್ನು ಬಿಡುಗಡೆ ಮಾಡಿ, ಈ ಅನುದಾನವನ್ನು ಆಯಾ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು, ಸಂಸದ್ ಸದಸ್ಯರಿಗೆ ಕಾಮಗಾರಿಗಳನ್ನು ಸೂಚಿಸಲು ಆದೇಶ ನೀಡಿರುತ್ತದೆ. ಈ ಆದೇಶವನ್ನು ದಿನಾಂಕ 23–12–1993 ರಂದು ಭಾರತ ಸರ್ಕಾರ ಆದೇಶ ಹೊರಡಿಸಿರುತ್ತದೆ.

1993–94 ರಿಂದ 1997–98 ರವರೆಗೆ ವಾರ್ಷಿಕ ತಲಾ ರೂ.100.00 ಲಕ್ಷಗಳಂತೆ ಎಲ್ಲಾ ಸಂಸದ್ ಸದಸ್ಯರಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, 1998–99 ರಿಂದ ಒಂದು ವರ್ಷಕ್ಕೆ ತಲಾ ರೂ. 200.00 ಲಕ್ಷ ಅನುದಾನವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ.

ಸಂಸದ್ ಸದಸ್ಯರ ಕ್ಷೇತ್ರಭಿವೃದ್ಧಿ ಯೋಜನಾ ಅಡಿಯಲ್ಲಿ ಶಾಲೆಗಳ, ಗ್ರಂಥಾಲಯ, ಹಾಸ್ಟೆಲ್‌ಗಳ ಕಟ್ಟಡ, ಕುಡಿಯುವ ನೀರಿನ ವ್ಯವಸ್ಥೆ, ಕೆರೆಗಳ ಅಭಿವೃದ್ಧಿ ರಸ್ತೆಗಳು ಮತ್ತು ಸೇತುವೆಗಳ ನಿರ್ಮಾಣ, ಅರಣ್ಯ ಅಭಿವೃದ್ಧಿ, ಪಾರ್ಕ್‌ಗಳ ಅಭಿವೃದ್ಧಿ, ಪ್ರೌಢಶಾಲೆ, ಕಾಲೇಜುಗಳಿಗೆ ಕಂಪ್ಯೂಟರ್, ಆಡಿಯೋ ವಿಷುಯಲ್‌ಗಳ ಸರಬರಾಜು ಹಾಗೂ ಆರೋಗ್ಯ ಕೇಂದ್ರ, ಪಶುವೈದ್ಯಕೀಯ ಆಸ್ಪತ್ರೆಗಳ ಕಟ್ಟಡ, ಆಸ್ಪತ್ರೆಗಳ ವೈದ್ಯಕೀಯ ಸಾಮಗ್ರಿಗಳು ಉದಾ: ಎಕ್ಸ್‌ರೇ ಯಂತ್ರಗಳು, ಆಂಬುಲೆನ್ಸ್‌ಗಳು ಸರಬರಾಜು ಮಾಡಲು ಹಾಗೂ ದೇಶದಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಅವಶ್ಯಕತೆ ಇರುತ್ತದೆ.

ಸದರಿ ಅಭಿವೃದ್ಧಿ ಕಾಮಗಾರಿಗಳು ಸರ್ಕಾರದ ಸಂಸ್ಥೆಗಳಾದ ಪಿ.ಡಬ್ಲ್ಯೂಡಿ, ಗ್ರಾಮೀಣಾಭಿವೃದ್ಧಿ, ನೀರಾವರಿ, ಕೃಷಿ, ಆರೋಗ್ಯ, ಶಿಕ್ಷಣ, ಪ್ರಾಧಿಕಾರಗಳು, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹೌಸಿಂಗ್ ಕಾರ್ಪೋರೇಷನ್ ಮತ್ತು ಇತರೆ ಸರ್ಕಾರಿ ಸಂಸ್ಥೆಗಳಿಂದ ಅನುಷ್ಠಾನಗೊಳಿಸಲು ಆದೇಶ ಇರುತ್ತದೆ. ಸದರಿ ಕಾಮಗಾರಿಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ-2000ರ ಮತ್ತು ನಿಯಮಾವಳಿಗನುಸಾರ ಹಾಗೂ ಪಿ.ಡಬ್ಲ್ಯೂಡಿ ಕೋಡ್‌ನ ಪ್ರಕಾರ ರೂ.1.00ಲಕ್ಷಗಳಿಗಿಂತ ಹೆಚ್ಚಾಗಿರುವ ಅಂದಾಜಿನ ಕಾಮಗಾರಿಗಳನ್ನು ಟೆಂಡರ್ ಮುಖಾಂತರ ಅನುಷ್ಠಾನಗೊಳಿಸಲಾಗುತ್ತಿದೆ.

ಸಂಸದ್ ಸದಸ್ಯರು ಸೂಚಿಸಿರುವ ಕಾಮಗಾರಿ ಅನುಷ್ಠಾನಗೊಳಿಸಲು EE, PWD/ PRED ರವರು ತಯಾರಿಸಿ ಸಲ್ಲಿಸಿದ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿ, ತದನಂತರ ಶೇ.75 ರಷ್ಟು ಮುಂಗಡವನ್ನು ಬಿಡುಗಡೆ ಮಾಡಿ, ಕಾಮಗಾರಿ ಪೂರ್ಣಗೊಂಡ ನಂತರ ಈ ಇಲಾಖೆಯ ಕ್ಲಾಸ್-1 ಅಫೀಸರ್‌ರೊಬ್ಬರು ತಪಾಸಣೆ ನಡೆಸಿ ಅವರಿಂದ ವರದಿ ಬಂದ ನಂತರ ಉಳಿದ ಶೇ.25 ರಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಈ ಜಿಲ್ಲೆಯ ವ್ಯಾಪ್ತಿಗೆ ಒಟ್ಟು 04 ಜನ ವಿಧಾನಸಭಾ ಸದಸ್ಯರು, 03 ವಿಧಾನ ಪರಿಷತ್ ಸದಸ್ಯರು, 01 ಲೋಕಸಭಾ ಸದಸ್ಯರು, 01 ರಾಜ್ಯ ಸಭಾ ಸದಸ್ಯರು ಬರುತ್ತಾರೆ.

ಕ್ರ. ಸಂ	ಲೋಕಸಭಾ ಸದಸ್ಯರು	ಕ್ರ. ಸಂ	ರಾಜ್ಯ ಸಭಾ ಸದಸ್ಯರು
1	ಶ್ರೀ ಎಂ.ವೀರಪ್ಪ ಮೊಯ್ಲಿ, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರ.	1	ಶ್ರೀ.ಕೆ.ಬಿ.ಕೃಷ್ಣಮೂರ್ತಿ
			<u>ವಿಧಾನ ಪರಿಷತ್ ಸದಸ್ಯರು</u> 1.ಶ್ರೀ ರಾಮಚಂದ್ರಗೌಡ-ಪದವೀಧರ ಕ್ಷೇತ್ರ 2.ಶ್ರೀ ಈ.ಕೃಷ್ಣಪ್ಪ-ಸ್ಥಳೀಯ ಸಂಸ್ಥೆಗಳ ಕ್ಷೇತ್ರ 3.ಶ್ರೀ ಪುಟ್ಟಣ್ಣ – ಉಪಾಧ್ಯಾಯರ ಕ್ಷೇತ್ರ
ವಿಧಾನಸಭಾ ಸದಸ್ಯರ ಹೆಸರು		**ವಿಧಾನಸಭಾ ಕ್ಷೇತ್ರದ ಹೆಸರು**	
1	ಶ್ರೀ ಎಂ.ವಿ. ನಾಗರಾಜ್	1	ನೆಲಮಂಗಲ (ಪ.ಜಾ) ವಿಧಾನಸಭಾ ಕ್ಷೇತ್ರ
2	ಶ್ರೀ ಜೆ.ನರಸಿಂಹಸ್ವಾಮಿ	2	ದೊಡ್ಡಬಳ್ಳಾಪುರ ವಿಧಾನಸಭಾ ಕ್ಷೇತ್ರ
3	ಶ್ರೀ ವೆಂಕಟಸ್ವಾಮಿ	3	ದೇವನಹಳ್ಳಿ ವಿಧಾನಸಭಾ ಕ್ಷೇತ್ರ
4	ಶ್ರೀ ಬಿ.ಎನ್. ಬಚ್ಚೇಗೌಡ	4	ಹೊಸಕೋಟೆ ವಿಧಾನಸಭಾ ಕ್ಷೇತ್ರ

ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆ

ಕರ್ನಾಟಕ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿ ಸರ್ಕಾರವು ಎಲ್ಲಾ ಶಾಸಕರಿಗೂ ತಮ್ಮ ತಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 2008-09ನೇ ಸಾಲಿನಲ್ಲಿ ಪ್ರತೀ ಶಾಸಕರಿಗೆ ರೂ.150.00ಲಕ್ಷ ಅನುದಾನ ನಿಗದಿಪಡಿಸಲಾಗಿದೆ. ವಿಧಾನ ಪರಿಷತ್ ಸದಸ್ಯರಿಗೆ ತಮ್ಮ ಆಯ್ಕೆಯ ಜಿಲ್ಲೆಯನ್ನು ನೋಡೆಲ್ ಜಿಲ್ಲೆಯನ್ನಾಗಿ ಪರಿಗಣಿಸಿ ಸಂಬಂಧಿಸಿದ ಜಿಲ್ಲಾಧಿಕಾರಿಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ವಿಧಾನ ಸಭಾ ಸದಸ್ಯರು ತಮ್ಮ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸದರಿ ಅನುದಾನದಡಿ ಅಭಿವೃದ್ದಿ ಕಾರ್ಯಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಯವರ ಮೂಲಕ ಅನುಷ್ಠಾನಗೊಳಿಸ ಬಹುದಾಗಿದ್ದು, ವಿಧಾನ ಪರಿಷತ್ ಸದಸ್ಯರು ರಾಜ್ಯದ ಯಾವ ಭಾಗದಲ್ಲಾದರೂ ಈ ಯೋಜನೆಯಡಿ ಪ್ರಸ್ತಾವನೆ ನೀಡಬಹುದಾಗಿದ್ದು, ಪ್ರಸ್ತಾವನೆ ಸ್ವೀಕೃತಿ ನಂತರ ನೋಡೆಲ್ ಜಿಲ್ಲೆಯ ಜಿಲ್ಲಾಧಿಕಾರಿ ಸಂಬಂಧಿಸಿದ ಜಿಲ್ಲಾಧಿಕಾರಿಗೆ ಅನುದಾನ ವರ್ಗಾವಣೆ ಮಾಡಬೇಕಾಗುತ್ತದೆ.

ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಮಾರ್ಗಸೂಚಿಯನ್ನು ಹೊರಡಿಸಿದ್ದು, ಸರ್ಕಾರದ ಆದೇಶ ಸಂಖ್ಯೆ: ಯೋಇ40ಪಿಎಂಎಂ2005,ದಿನಾಂಕ:16.5.2005ರಂತೆ ಈ ಮಾರ್ಗಸೂಚಿಯನ್ನು ಪರಿಷ್ಕರಿಸಲಾಗಿದ್ದು, ಈ ಯೋಜನೆಯಡಿ ಅನುಷ್ಠಾನಗೊಳಿಸಹುದಾದ ಹಾಗೂ ನಿಷಿದ್ಧಗೊಳಿಸಲಾದ ಕಾಮಗಾರಿಗಳ ಬಗ್ಗೆ ವಿವರಗಳನ್ನು ಒದಗಿಸಲಾಗಿದೆ. ಸರ್ಕಾರದ ಶಾಲಾ ಕಾಲೇಜುಗಳ ಎಲ್ಲಾ ರೀತಿಯ ಅಭಿವೃದ್ದಿ ಕಾಮಗಾರಿಗಳು, ಸಾರ್ವಜನಿಕ ಪಾರ್ಕಗೆ ಬೇಲಿ, ಬೆಂಚ್ ಸರ್ಕಾರದ ಶಾಲಾ ಕಾಲೇಜುಗಳ ಎಲ್ಲಾ ರೀತಿಯ ಅಭಿವೃದ್ದಿ ಕಾಮಗಾರಿಗಳು, ಸಾರ್ವಜನಿಕ ಕುಡಿಯುವ ನೀರಿನ, ವಿದ್ಯುದ್ದೀಪದ ವ್ಯವಸ್ಥೆ ಮುಂತಾದ ಸಾರ್ವಜನಿಕರಿಗೆ ಉಪಯೋಗಬಹುದಾದ ಅಭಿವೃದ್ದಿ ಕಾರ್ಯಗಳಿಗೆ ಈ ಯೋಜನೆಯಡಿ ಅವಕಾಶವಿರುತ್ತದೆ. ಖಾಸಗಿ ಸಂಸ್ಥೆಗಳು/ ಟ್ರಸ್ಟಗಳು ನಡೆಸುವ ಶಾಲೆಗಳ ಹಾಗೂ ಸರ್ಕಾರಿ ಕಟ್ಟಡಗಳ ದುರಸ್ತಿ ಬಗ್ಗೆ ಅವಕಾಶವಿರುವುದಿಲ್ಲ.

ಮಾನ್ಯ ಶಾಸಕರುಗಳಿಂದ ಪ್ರಸ್ತಾವನೆ ಸ್ವೀಕರಿಸಿದ ನಂತರ ಮಾರ್ಗಸೂಚಿಗಳಡಿ ಸಂಬಂಧಿಸಿದ ಸ್ಥಳೀಯ/ಸರ್ಕಾರಿ ಇಲಾಖೆಗಳಿಂದ (ಉದಾ: ಪಂಚಾಯತ್‌ರಾಜ್ ಇಂಜಿನಿಯರಿಂಗ್, ಬಿ.ಡಬ್ಲ್ಯೂ. ಎಸ್.ಎಸ್.ಬಿ., ಲೋಕೋಪಯೋಗಿ ಇಲಾಖೆ, ಕೊಳಚೆ ನಿರ್ಮೂಲನಾ ಮಂಡಳಿ, ನಿರ್ಮಿತಿ ಕೇಂದ್ರ, ನಗರಸಭೆಗಳು ಹಾಗೂ ಪುರಸಭೆಗಳು–ಮೂಲಕವಾಗಿ) ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಅಂದಾಜು ಪಟ್ಟಿ ಪಡೆದು, ಸರ್ಕಾರದಿಂದ ಕಾಲಕಾಲಕ್ಕೆ ಬಿಡುಗಡೆಯಾಗುವ ಅನುದಾನದ ಲಭ್ಯತೆಗೊಳಪಟ್ಟು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕ ನಿಯಮಗಳಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು. ಕಾಮಗಾರಿ ಪೂರ್ಣಗೊಂಡ ಬಗ್ಗೆ ದೃಢಪಡಿಸಿಕೊಂಡು, ನಂತರ ಜಿಲ್ಲಾಧಿಕಾರಿಗಳು ನೇಮಿಸುವ ಒಬ್ಬ ಅಧಿಕಾರಿಯಿಂದ ಕಾಮಗಾರಿ ಪೂರ್ಣಗೊಂಡ ಬಗ್ಗೆ ಪರಿಶೀಲನೆ ನಡೆಸಿ ಅನುಮೋದನೆಯಂತೆ ಗುಣಾತ್ಮಕವಾಗಿ ಕಾಮಗಾರಿ ಪೂರ್ಣಗೊಂಡ ಬಗ್ಗೆ ದೃಢಪಡಿಸಿಕೊಂಡು ಅನುಷ್ಠಾನಾಧಿಕಾರಿಗಳಿಗೆ ಅನುದಾನ ಬಿಡುಗಡೆಗೊಳಿಸಲಾಗುವುದು. ಅನುಷ್ಠಾನಾಧಿಕಾರಿಗಳಿಂದ ಬಳಕೆ ಪ್ರಮಾಣ ಪತ್ರ ಪಡೆದು ಸರ್ಕಾರಕ್ಕೆ ಸಲ್ಲಿಸಲಾಗುವುದು.

10. ಗಡಿಪ್ರದೇಶಾಭಿವೃದ್ದಿ :

ಸರ್ಕಾರ ಗಡಿ ಅಭಿವೃದ್ದಿಗೆ ವಿಶೇಷ ಆದ್ಯತೆ ನೀಡಿ ಈ ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹೊಸಕೋಟೆ ತಾಲ್ಲೂಕಿನ ಕೆಲವು ಗ್ರಾಮಗಳು ತಮಿಳುನಾಡು ಗಡಿಪ್ರದೇಶಕ್ಕೆ ಒಳಪಟ್ಟಿದ್ದು, ಈ ಯೋಜನೆಯ ಪೂರ್ಣ ಪ್ರಯೋಜನವನ್ನು ಹೊಸಕೋಟೆ ತಾಲ್ಲೂಕಿನ ಗಡಿ ಗ್ರಾಮಗಳು ಮಾತ್ರ ಪಡೆಯುತ್ತಿವೆ.

11. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪ.ಜಾ/ಪ.ಪಂ.ಕ್ಕೆ ಸೇರಿದ ಜನರ ಅಭಿವೃದ್ದಿಯ ಕಾರ್ಯಗಳ ಪರಿಶೀಲನೆಯ ಸಮಿತಿಗಳಲ್ಲಿ ಅಧಿಕಾರೇತರ ಸದಸ್ಯರು ಭಾಗವಹಿಸಿ ಸಲಹೆಗಳನ್ನು ನೀಡುತ್ತಾರೆ.

12. ಜೀತ ವಿಮುಕ್ತಿ ಕಾರ್ಯಕ್ರಮಗಳಲ್ಲಿ ಸ್ವಯಂ ಸೇವಾ ಸಂಘಗಳು ಪಾಲ್ಗೊಳುತ್ತವೆ.

13. ಅಲ್ಪಸಂಖ್ಯಾತರ ಅಭಿವೃದ್ದಿ ಕಾರ್ಯಕ್ರಮಗಳ ಅನುಷ್ಠಾನದ ಸಭೆಗಳಲ್ಲಿ ಅಧಿಕಾರೇತರ ಸದಸ್ಯರು ಭಾಗವಹಿಸಿ ಸಲಹೆಗಳನ್ನು ನೀಡುತ್ತಾರೆ.

ಅಧ್ಯಾಯ–9

ಕಲಂ 4(1) (b)(ix)

ಈ ಕಛೇರಿಯ ವಿವಿಧ ಶಾಖೆ/ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಸಂಪರ್ಕ ಜಾಲ (Directory)

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಜಿಲ್ಲಾಧಿಕಾರಿಯವರ ಕಛೇರಿಯ ಸಿಬ್ಬಂದಿ ವರ್ಗದವರ ವಿವರ

ಕ್ರ.ಮ ಸಂಖ್ಯೆ	ಅಧಿಕಾರಿ: ನೌಕರರ ಹೆಸರು ಶ್ರೀಯುತರು	ಪದನಾಮ	ದೂರವಾಣಿ ಸಂಖ್ಯೆ
1	ಆರ್.ಕೆ.ರಾಜು,ಭಾ.ಆ.ಸೇ.,	ಜಿಲ್ಲಾಧಿಕಾರಿ	22867221
2	ಆರ್.ಶ್ರೀನಿವಾಸ,ಕೆ.ಎ.ಎಸ್.,	ಅಪರ ಜಿಲ್ಲಾಧಿಕಾರಿ	22860412

ಕ್ರ.ಮ ಸಂಖ್ಯೆ	ಅಧಿಕಾರಿ: ನೌಕರರ ಹೆಸರು ಶ್ರೀಯುತರು	ಪದನಾಮ	ದೂರವಾಣಿ ಸಂಖ್ಯೆ
3	ಡಾ॥ ಪ್ರಜ್ಞಾ ಅಮ್ಮೆಂಬಾಳ್	ಕಛೇರಿ ಸಹಾಯಕರು	22865512
4	ಮಲ್ಲಿಕಾರ್ಜುನಯ್ಯ	ಉಪ ನಿರ್ದೇಶಕರು, ಭೂದಾಖಲೆಗಳ ಇಲಾಖೆ	22867007
5	ಎಸ್.ಗಂಗಬೋರಯ್ಯ	ಸಹಾಯಕ ನಿರ್ದೇಶಕರು, ಭೂದಾಖಲೆಗಳ ಇಲಾಖೆ	22867007
6	ಚಂದಳೇರ್.ಬಿ.ಎಫ್	ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಭೂ ದಾಖಲೆಗಳ ಇಲಾಖೆ.	22867007
7	ಎಂ.ಯಶೋದ	ಮುನಿಸಿಪಲ್ ತಹಶೀಲ್ದಾರ್	22867007
8	ಮಂಜುನಾಂಥ್.ಎ.ಯು	ಚು.ತಹಶೀಲ್ದಾರ್	22867007
9	ಮ್ಯಾಗ್ದಾಲಿನ್ ನಳಿನ	ಮುಜರಾಯಿ ಸಹಾಯಕರು	22867007
10	ಭಾರತಿ	ಜೆ.ಹೆಚ್.ಎಂ	22867007
11	ವಿಜಯಣ್ಣ	ಆರ್.ಹೆಚ್.ಎ	22867007
12	ಮನೋರಮ.ಕೆ.ಎಂ.	ಆರ್.ಹೆಚ್.ಎಂ	22867007
13	ರೇವಣ್ಣ	ಚುನಾವಣಾ ಶಿರಸ್ತೆದಾರರು	22867007
14	ಬಿ.ಚಲುವರಾಜು	ಲೆಕ್ಕಾಧಿಕಾರಿ	22867007
15	ರಂಗಶಾಮಯ್ಯ.ವೈ.ಎಲ್	ಸೂಪರಿಂಟಿಂಡೆಂಟ್	22867007
16	ಆರ್.ಗೋವಿಂದರಾಜು	ಶೀಘ್ರಲಿಪಿಗಾರರು	22867007
17	ಎಸ್.ಜಿ.ಗುರುಬಸಪ್ಪ ಮಠ	ಪ್ರ.ದ.ಸ	22867007
18	ಎಂ.ರಾಘವ	ಪ್ರ.ದ.ಸ	22867007
19	ಡಿ.ಗುಡಿಯಯ್ಯ	ಪ್ರ.ದ.ಸ	22867007
20	ನರಸಿಂಹಯ್ಯ	ಪ್ರ.ದ.ಸ	22867007
21	ಸಿ.ಎನ್.ದೊರೆಸ್ವಾಮಿ	ಪ್ರ.ದ.ಸ	22867007
22	ಜಿ.ಬಿ.ಚಂದ್ರಶೇಖರ್	ಪ್ರ.ದ.ಸ	22867007
23	ಬಿ.ಚಂದ್ರ	ಪ್ರ.ದ.ಸ	22867007
24	ಎಂ.ಮುನಿಯಪ್ಪ	ಪ್ರ.ದ.ಸ	22867007

ಕ್ರ.ಮ ಸಂಖ್ಯೆ	ಅಧಿಕಾರಿ: ನೌಕರರ ಹೆಸರು ಶ್ರೀಯುತರು	ಪದನಾಮ	ದೂರವಾಣಿ ಸಂಖ್ಯೆ
25	ಅಬ್ಬಿಗೇರಿ ಗುರುರಾಜ್	ಪ್ರ.ದ.ಸ	22867007
26	ಬೋಜಮ್ಮ.ಕೆ.ಆರ್	ಪ್ರ.ದ.ಸ	22867007
27	ವಿ.ವಿಜಯಕುಮಾರಿ	ಪ್ರ.ದ.ಸ	22867007
28	ಮೈಕಲ್ ಬೆಂಜಿಮಿನ್	ದ್ವಿ.ದ.ಸ	22867007
29	ಆರ್.ಸಂಧ್ಯಾ	ದ್ವಿ.ದ.ಸ	22867007
30	ಸಿ.ಎಸ್.ಜ್ಞಾನೇಶ್ವರಿ	ದ್ವಿ.ದ.ಸ	22867007
31	ಜೆ.ಕೆ.ಶಶಿಪ್ರಭಾ	ದ್ವಿ.ದ.ಸ	22867007
32	ಟಿ.ವಿಜಯಲಕ್ಷ್ಮಿ	ದ್ವಿ.ದ.ಸ	22867007
33	ಷಾಕೀಬ್ ರಹಮಾನ್	ದ್ವಿ.ದ.ಸ	22867007
34	ಮಹಮದ್ದಅಲಿ	ದ್ವಿ.ದ.ಸ	22867007
35	ಪಿ.ಕೆ.ವಾಣಿಶ್ರೀ	ದ್ವಿ.ದ.ಸ	22867007
36	ಎಸ್.ಕೆ.ಮರಿಸ್ವಾಮಿ	ದ್ವಿ.ದ.ಸ	22867007
37	ಸಿ.ಸಿ.ಲೀಲಾವತಿ	ದ್ವಿ.ದ.ಸ	22867007
38	ಹೆಚ್.ಎಸ್.ಜರೀನಾ ಬೇಗಂ	ದ್ವಿ.ದ.ಸ	22867007
39	ಎನ್.ಆರ್.ಲಕ್ಷ್ಮಿನಾಥ್	ದ್ವಿ.ದ.ಸ	22867007
40	ಬೌದ್ಧಕಾಂತಿ.ಎಂ	ಬೆರಳಚ್ಚುಗಾರರು	22867007
41	ಸಿ.ಎಸ್.ಉಮಾ	ಬೆರಳಚ್ಚುಗಾರರು	22867007
42	ಸಿ.ಪಿ.ಪ್ರೇಮಲತಾ	ಬೆರಳಚ್ಚುಗಾರರು	22867007
43	ಛಾಯಾದೇವಿ.ಬಿ.ಕೆ	ಬೆರಳಚ್ಚುಗಾರರು	22867007
44	ದನುಮತಿ	ಬೆರಳಚ್ಚುಗಾರರು	22867007
45	ಪ್ರಕಾಶ್.ಕೆ	ಬೆರಳಚ್ಚುಗಾರರು	22867007
46	ಸಾಕಮ್ಮ	ಡಿ.ಗ್ರೂಪ್	22867007
47	ಸಿ.ಶ್ರೀರಾಮ್	ಡಿ.ಗ್ರೂಪ್	22867007
48	ಚಿಕ್ಕಹನುಮಯ್ಯ.ಎ.ಪಿ	ಡಿ.ಗ್ರೂಪ್	22867007
49	ಕೆ.ಹೆಚ್.ರಾಜೇಶ್ವರಿ	ಡಿ.ಗ್ರೂಪ್	22867007

ಕ್ರ.ಮ ಸಂಖ್ಯೆ	ಅಧಿಕಾರಿ: ನೌಕರರ ಹೆಸರು ಶ್ರೀಯುತರು	ಪದನಾಮ	ದೂರವಾಣಿ ಸಂಖ್ಯೆ
50	ಪಿ.ಕೃಷ್ಣಪ್ಪ	ಡಿ.ಗ್ರೂಪ್	22867007
51	ಎಸ್.ಪಿ.ರಾಜಗೋಪಾಲ್	ಡಿ.ಗ್ರೂಪ್	22867007
52	ತಿಪ್ಪೇಸ್ವಾಮಿ.ಕೆ	ಡಿ.ಗ್ರೂಪ್	22867007
53	ವಿ.ಬಲರಾಮ್	ಡಿ.ಗ್ರೂಪ್	22867007
54	ಪುಟ್ಟರಾಮಯ್ಯ	ಡಿ.ಗ್ರೂಪ್	22867007
55	ವೆಂಕಟೇಗೌಡ	ಡಿ.ಗ್ರೂಪ್	22867007
56	ಎನ್.ಪಾರ್ವತಮ್ಮ	ಡಿ.ಗ್ರೂಪ್	22867007
57	ಎಸ್.ಪುಟ್ಟಸ್ವಾಮಿ	ಡಿ.ಗ್ರೂಪ್	22867007
58	ಗೌರಿಶಂಕರ್	ಡಿ.ಗ್ರೂಪ್	22867007
59	ಆರ್.ಲಕ್ಷ್ಮಿ	ಡಿ.ಗ್ರೂಪ್	22867007
60	ಎಂ.ಕೃಷ್ಣಮೂರ್ತಿ	ಡಿ.ಗ್ರೂಪ್	22867007
61	ಎನ್.ನಾಗರಾಜ್	ಡಿ.ಗ್ರೂಪ್	22867007
62	ಡಿ.ಅಮರನಾಥ	ಡಿ.ಗ್ರೂಪ್	22867007
63	ಎಸ್.ವಿಜಯ	ಡಿ.ಗ್ರೂಪ್	22867007
64	ಗುಣಶೇಖರ್.ಡಿ	ಡ್ರೈವರ್	22867007
65	ಡಿ.ಕೃಷ್ಣ	ಡ್ರೈವರ್	22867007
66	ಕೆ.ಎ.ಅಕ್ಬರ್‌ಅಲಿಖಾನ್	ಡ್ರೈವರ್	22867007

ಅಧ್ಯಾಯ–10

ಕಲಂ 4(1) (b) (x)

ಅಧಿಕಾರಿಗಳ ಮತ್ತು ನೌಕರರ ನಿರ್ದೇಶಿಕೆ ಹಾಗೂ ವಿನಿಯಮಗಳಲ್ಲಿ ಉಪಬಂಧಿಸಿರುವಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ಗೌರವಧನ ವಿವರ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಜಿಲ್ಲಾಧಿಕಾರಿಯವರ ಕಛೇರಿಯ ಸಿಬ್ಬಂದಿ ವರ್ಗದವರ ವಿವರ

ಕ್ರ.ಮ ಸಂಖ್ಯೆ	ಅಧಿಕಾರಿ : ನೌಕರರ ಹೆಸರು ಶ್ರೀಯುತರು	ಪದನಾಮ	ವೇತನ ಶ್ರೇಣಿ	ಪಡೆಯುತ್ತಿರುವ ವೇತನ ರೂ.ಗಳಲ್ಲಿ
1	ಆರ್.ಕೆ.ರಾಜು,ಭಾ.ಆ.ಸೇ.,	ಜಿಲ್ಲಾಧಿಕಾರಿ	15600–39100	64000
2	ಆರ್.ಶ್ರೀನಿವಾಸ,ಕೆ.ಎ.ಎಸ್.,	ಅಪರ ಜಿಲ್ಲಾಧಿಕಾರಿ	15200–25650	38564
3	ಕೆ.ಎನ್.ರಾಮಾನುಜಪ್ಪ	ಉಪ ವಿಭಾಗಾಧಿಕಾರಿ ಭೂಮಿ ಉಸ್ತುವಾರಿ ಕೋಶ	14050–25025	30524

ಕ್ರ.ಮ ಸಂಖ್ಯೆ	ಅಧಿಕಾರಿ : ನೌಕರರ ಹೆಸರು ಶ್ರೀಯುತರು	ಪದನಾಮ	ವೇತನ ಶ್ರೇಣಿ	ಪಡೆಯುತ್ತಿರುವ ವೇತನ ರೂ.ಗಳಲ್ಲಿ
4	ಡಾ॥ ಪ್ರಜ್ಞಾ ಅಮ್ಮೆಂಬಾಳ್	ಕಛೇರಿ ಸಹಾಯಕರು	12000–22650	19734
5	ಮಲ್ಲಿಕಾರ್ಜುನಯ್ಯ	ಉಪ ನಿರ್ದೇಶಕರು, ಭೂದಾಖಲೆಗಳ ಇಲಾಖೆ	14050–25050	19050
6	ಎಸ್.ಗಂಗಬೋರಯ್ಯ	ಸಹಾಯಕ ನಿರ್ದೇಶಕರು, ಭೂದಾಖಲೆಗಳ ಇಲಾಖೆ	10300–20025	26337
7	ಚಂದಳೇರ್.ಬಿ.ಎಫ್	ಅಧೀಕ್ಷಕರು, ಉಪ ನಿರ್ದೇಶಕರ ಕಛೇರಿ, ಭೂ ದಾಖಲೆಗಳ ಇಲಾಖೆ.	10000–18150	24998
8	ಎಂ.ಯಶೋದ	ಮುನಿಸಿಪಲ್ ತಹಶೀಲ್ದಾರ್	12000–22650	19734
9	ಮಂಜುನಾಂಥ್.ಎ.ಯು	ಚು.ತಹಶೀಲ್ದಾರ್	11400–21600	23052
10	ಮ್ಯಾಗ್ಡಾಲಿನ್ ನಳಿನ	ಮುಜರಾಯಿ ಸಹಾಯಕರು	11400–21600	23052
11	ಅನಿಲ್ ಕುಮಾರ್.ಎಸ್.ಬಿ	ತಹಶೀಲ್ದಾರ್	12000–22650	33724
12	ಕೆ.ಎಸ್.ಗುರುಮೂರ್ತಿ	ತಹಶೀಲ್ದಾರ್ ಭೂಮಿ ಉಸ್ತುವಾರಿ ಕೋಶ	20025–28275	31940
13	ಭಾರತಿ	ಜೆ.ಹೆಚ್.ಎಂ	10000–18150	19310
14	ವಿಜಯಣ್ಣ	ಆರ್.ಹೆಚ್.ಎ	10000–18150	20437
15	ಮನೋರಮ.ಕೆ.ಎಂ.	ಆರ್.ಹೆಚ್.ಎಂ	10000–18150	19310
16	ರೇವಣ್ಣ	ಚುನಾವಣಾ ಶಿರಸ್ತೆದಾರರು	10000–18150	28416
17	ಬಿ.ಚಲುವರಾಜು	ಲೆಕ್ಕಾಧಿಕಾರಿ	11400–21600	25048
18	ರಂಗಶಾಮಯ್ಯ.ವೈ.ಎಲ್	ಸೂಪರಿಂಟೆಂಡೆಂಟ್	10000–18150	17888
19	ಆರ್.ಗೋವಿಂದರಾಜು	ಶೀಘ್ರಲಿಪಿಗಾರರು	8000–14800	18038
20	ಎಸ್.ಜಿ.ಗುರುಬಸಪ್ಪ ಮಠ	ಪ್ರ.ದ.ಸ	8000–14800	23734
21	ಎಂ.ರಾಘವ	ಪ್ರ.ದ.ಸ	7275–13350	15360
22	ಡಿ.ಗುಡಿಯಯ್ಯ	ಪ್ರ.ದ.ಸ	7275–13350	24055
23	ನರಸಿಂಹಯ್ಯ	ಪ್ರ.ದ.ಸ	7275–13350	16225
24	ಸಿ.ಎನ್.ದೊರೆಸ್ವಾಮಿ	ಪ್ರ.ದ.ಸ	7275–13350	15360
25	ಜಿ.ಬಿ.ಚಂದ್ರಶೇಖರ್	ಪ್ರ.ದ.ಸ	7275–13350	16250
26	ಬಿ.ಚಂದ್ರ	ಪ್ರ.ದ.ಸ	7275–13350	19909
27	ಎಂ.ಮುನಿಯಪ್ಪ	ಪ್ರ.ದ.ಸ	7275–13350	18836

ಕ್ರ.ಮ ಸಂಖ್ಯೆ	ಅಧಿಕಾರಿ : ನೌಕರರ ಹೆಸರು ಶ್ರೀಯುತರು	ಪದನಾಮ	ವೇತನ ಶ್ರೇಣಿ	ಪಡೆಯುತ್ತಿರುವ ವೇತನ ರೂ.ಗಳಲ್ಲಿ
28	ಅಬ್ಬಿಗೇರಿ ಗುರುರಾಜ್	ಪ್ರ.ದ.ಸ	7275–13350	22122
29	ಬೋಜಮ್ಮ.ಕೆ.ಆರ್	ಪ್ರ.ದ.ಸ	7275–13350	13938
30	ವಿ.ವಿಜಯಕುಮಾರಿ	ಪ್ರ.ದ.ಸ	7275–13350	19310
31	ಮೈಕಲ್ ಬೆಂಜಿಮಿನ್	ದ್ವಿ.ದ.ಸ	6250–12000	12990
32	ಆರ್.ಸಂಧ್ಯಾ	ದ್ವಿ.ದ.ಸ	6250–12000	14294
33	ಸಿ.ಎಸ್.ಜ್ಞಾನೇಶ್ವರಿ	ದ್ವಿ.ದ.ಸ	5800–10500	12248
34	ಜೆ.ಕೆ.ಶಶಿಪ್ರಭಾ	ದ್ವಿ.ದ.ಸ	5800–10500	10944
35	ಟಿ.ವಿಜಯಲಕ್ಷ್ಮಿ	ದ್ವಿ.ದ.ಸ	5800–10500	12248
36	ಷಾಕೀಬ್ ರಹಮಾನ್	ದ್ವಿ.ದ.ಸ	5800–10500	10944
37	ಮಹಮದ್ದಅಲಿ	ದ್ವಿ.ದ.ಸ	5800–10500	11695
38	ಪಿ.ಕೆ.ವಾಣಿಶ್ರೀ	ದ್ವಿ.ದ.ಸ	6250–12000	13306
39	ಎಸ್.ಕೆ.ಮರಿಸ್ವಾಮಿ	ದ್ವಿ.ದ.ಸ	6250–12000	14519
40	ಸಿ.ಸಿ.ಲೀಲಾವತಿ	ದ್ವಿ.ದ.ಸ	6250–12000	14369
41	ಹೆಚ್.ಎಸ್.ಜರೀನಾ ಬೇಗಂ	ದ್ವಿ.ದ.ಸ	5800–10500	12248
42	ಎನ್.ಆರ್.ಲಕ್ಷ್ಮಿನಾಥ್	ದ್ವಿ.ದ.ಸ	6250–12000	13938
43	ಬೌದ್ದಕಾಂತಿ.ಎಂ	ಬೆರಳಚ್ಚುಗಾರರು	7275–13350	20980
44	ಸಿ.ಎಸ್.ಉಮಾ	ಬೆರಳಚ್ಚುಗಾರರು	5800–10500	11583
45	ಸಿ.ಪಿ.ಪ್ರೇಮಲತಾ	ಬೆರಳಚ್ಚುಗಾರರು	5800–10500	10560
46	ಛಾಯಾದೇವಿ.ಬಿ.ಕೆ	ಬೆರಳಚ್ಚುಗಾರರು	6250–12000	12764
47	ದನುಮತಿ	ಬೆರಳಚ್ಚುಗಾರರು	7275–13350	20980
48	ಪ್ರಕಾಶ್.ಕೆ	ಬೆರಳಚ್ಚುಗಾರರು	5800–10500	6950
49	ಸಾಕಮ್ಮ	ಡಿ.ಗ್ರೂಪ್	4800–7275	7942
50	ಸಿ.ಶ್ರೀರಾಮ್	ಡಿ.ಗ್ರೂಪ್	5500–9500	15005
51	ಚಿಕ್ಕಹನುಮಯ್ಯ.ಎ.ಪಿ	ಡಿ.ಗ್ರೂಪ್	5200–8200	10246
52	ಕೆ.ಹೆಚ್.ರಾಜೇಶ್ವರಿ	ಡಿ.ಗ್ರೂಪ್	4800–7275	8416
53	ಪಿ.ಕೃಷ್ಣಪ್ಪ	ಡಿ.ಗ್ರೂಪ್	5200–8200	10075
54	ಎಸ್.ಪಿ.ರಾಜಗೋಪಾಲ್	ಡಿ.ಗ್ರೂಪ್	5200–8200	13306
55	ತಿಪ್ಪೇಸ್ವಾಮಿ.ಕೆ	ಡಿ.ಗ್ರೂಪ್	5200–8200	11418
56	ವಿ.ಬಲರಾಮ್	ಡಿ.ಗ್ರೂಪ್	5200–8200	13306

ಕ್ರ.ಮ ಸಂಖ್ಯೆ	ಅಧಿಕಾರಿ : ನೌಕರರ ಹೆಸರು ಶ್ರೀಯುತರು	ಪದನಾಮ	ವೇತನ ಶ್ರೇಣಿ	ಪಡೆಯುತ್ತಿರುವ ವೇತನ ರೂ.ಗಳಲ್ಲಿ
57	ಪುಟ್ಟರಾಮಯ್ಯ	ಡಿ.ಗ್ರೂಪ್	4800–7275	7784
58	ವೆಂಕಟೇಗೌಡ	ಡಿ.ಗ್ರೂಪ್	4800–7275	7784
59	ಎನ್.ಪಾರ್ವತಮ್ಮ	ಡಿ.ಗ್ರೂಪ್	4800–7275	8416
60	ಎಸ್.ಪುಟ್ಟಸ್ವಾಮಿ	ಡಿ.ಗ್ರೂಪ್	5200–8200	11695
61	ಗೌರಿಶಂಕರ್	ಡಿ.ಗ್ರೂಪ್	4800–7275	9364
62	ಆರ್.ಲಕ್ಷ್ಮಿ	ಡಿ.ಗ್ರೂಪ್	4800–7275	8100
63	ಎಂ.ಕೃಷ್ಣಮೂರ್ತಿ	ಡಿ.ಗ್ರೂಪ್	5200–8200	12248
64	ಎನ್.ನಾಗರಾಜ್	ಡಿ.ಗ್ರೂಪ್	5200–8200	10075
65	ಡಿ.ಅಮರನಾಥ	ಡಿ.ಗ್ರೂಪ್	5200–8200	11971
66	ಎಸ್.ವಿಜಯ	ಡಿ.ಗ್ರೂಪ್	4800–7275	7942
67	ಗುಣಶೇಖರ್.ಡಿ	ಡ್ರೈವರ್	6250–12000	17574
68	ಡಿ.ಕೃಷ್ಣ	ಡ್ರೈವರ್	5800–10500	10075
69	ಕೆ.ಎ.ಅಕ್ಬರ್‌ಅಲಿಖಾನ್	ಡ್ರೈವರ್	5800–10500	9872

ಅಧ್ಯಾಯ–11

ಕಲಂ 4(1) (b)(xi)

ಎಲ್ಲಾ ಯೋಜನೆಗಳ ವಿವರಗಳನ್ನು ಸೂಚಿಸುವ, ಪ್ರಸ್ತಾವಿತ ವೆಚ್ಚಗಳನ್ನು ಮತ್ತು ಮಾಡಲಾದ ಬಟವಾಡೆಗಳ ವರದಿಯನ್ನು ಸೂಚಿಸಿ: ಅದರ ಪ್ರತಿಯೊಂದು ಏಜೆನ್ಸಿಗೆ ಹಂಚಿಕೆ ಮಾಡಲಾದ ಆಯವ್ಯಯದ ವಿವರ.

2009–10ನೇ ಸಾಲಿನ ಆಯವ್ಯಯದ ಬಗ್ಗೆ ಟಿಪ್ಪಣಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಸಂಬಂಧಿಸಿದಂತೆ, 2009–10ನೇ ಸಾಲಿನ ಆಯವ್ಯಯ ಅಂದಾಜುಗಳು ಈ ಕೆಳಕಂಡಂತೆ ಇರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಲೆಕ್ಕ ಶೀರ್ಷಿಕೆ	ವೇತನ ಅಂದಾಜು	ವೇತನೇತರ ಅಂದಾಜು
1.	2053–00–093–1–01 ಜಿಲ್ಲಾಧಿಕಾರಿಗಳ ಕಛೇರಿ	140.15	20.75
2.	2053–00–094–1–01 ಉಪವಿಭಾಗಾಧಿಕಾರಿಗಳ ಕಛೇರಿ	36.62	3.25
3.	2053–00–094–7–01 ತಾಲ್ಲೂಕು ಕಛೇರಿಗಳು	400.09	17.00
4.	2053–00–094–7–01 ನಾಡಕಛೇರಿಗಳು	41.29	–
5.	2070–00–115–1–01 ಇತರೆ ಸೇವೆಗಳು	–	–
6.	2029–00–101–1–01 ಗ್ರಾಮಲೆಕ್ಕಾಧಿಕಾರಿಗಳು	447.00	4.40

ಅಧ್ಯಾಯ–12

ಕಲಂ 4(1) (b)(xii)

ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರ.

1) ಸಾರ್ವಜನಿಕ ಪ್ರಾಧಿಕಾರಿಯಾಗಿ ಸಬ್ಸಿಡಿ ದೊರೆಯುತ್ತಿರುವ ಕಾರ್ಯಚಟುವಟಿಕೆಗಳು/ಕಾರ್ಯಕ್ರಮಗಳು/ಯೋಜನೆಗಳನ್ನು ರೂಪಿಸುತ್ತಿರುವ ಬಗ್ಗೆ ವಿವರಗಳನ್ನು ನೀಡುವುದು.
2) ವಿವಿಧ ಕಾರ್ಯಕ್ರಮ/ಯೋಜನೆಗಳಲ್ಲಿ ದೊರೆಯುತ್ತಿರುವ ಸಬ್ಸಿಡಿಯ ಸ್ವರೂಪ, ಅರ್ಹತೆ ಮಾನದಂಡ ಒಪ್ಪುವ ಪ್ರಾಧಿಕಾರದ ಹುದ್ದೆಯ ವಿವರ.

ಕಾರ್ಯಕ್ರಮ/ ಕಾರ್ಯಚಟುವಟಿಕೆಯ ಹೆಸರು	ಸಬ್ಸಿಡಿಯ ಸ್ವರೂಪ/ಸ್ಕೇಲ್	ಸಬ್ಸಿಡಿಯನ್ನು ಮಂಜೂರಾತಿ ನೀಡಲು ಇರುವ ಅರ್ಹತೆ ಮಾನದಂಡ	ಸಬ್ಸಿಡಿಯನ್ನು ಮಂಜೂರ್ಮಾಡುವ ಅಧಿಕಾರಿಯ ಹುದ್ದೆಯ ಹೆಸರು
ಈ ಕಛೇರಿಗೆ ಅನ್ವಯಿಸುವುದಿಲ್ಲ.			

3) ಸಬ್ಸಿಡಿ ಕಾರ್ಯಕ್ರಮವನ್ನು ಪ್ರದರ್ಶಿಸುವ ಬಗೆಯನ್ನು ವಿವರಿಸುವುದು.

ಕಾರ್ಯಕ್ರಮ/ ಕಾರ್ಯಚಟುವಟಿಕೆಯ ಹೆಸರು	ಅರ್ಜಿಯ ವಿಧಾನಗಳು	ಮಂಜೂರಾತಿ ವಿಧಾನಗಳು	ವಿತರಿಸುವ ವಿಧಾನಗಳು
ಈ ಕಛೇರಿಗೆ ಅನ್ವಯಿಸುವುದಿಲ್ಲ.			

ಅಧ್ಯಾಯ–13

ಕಲಂ 4(1) (b)(xiii)

ನೀಡಿರುವ ರಿಯಾಯಿತಿಗಳನ್ನು ಅನುಮತಿ ಪತ್ರಗಳನ್ನು ಅಥವಾ ಅಧಿಕಾರ ಪತ್ರಗಳನ್ನು ಪಡೆಯುವವರ ವಿವರ.

ಕಾರ್ಯಕ್ರಮ/ಯೋಜನೆಗಳ ಹೆಸರು				
ಕ್ರ.ಸಂ	ಸೌಲಭ್ಯ ಸ್ವೀಕರಿಸಿದ ಸಂಸ್ಥೆಗಳ ಹೆಸರು ಮತ್ತು ವಿಳಾಸ	ಸೌಲಭ್ಯ ಮಂಜೂರಾಗಿರುವ ಪ್ರಮಾಣ/ತರಹೆ	ಮಂಜೂರಾಗಿರುವ ದಿನಾಂಕ	ಮಂಜೂರಾತಿ ನೀಡುವ ಪ್ರಾಧಿಕಾರಿಯ ಹೆಸರು ಮತ್ತು ಹುದ್ದೆ.
ಈ ಕಛೇರಿಗೆ ಅನ್ವಯಿಸುವುದಿಲ್ಲ.				

ಅಧ್ಯಾಯ–14

ಕಲಂ 4(1) (b)(xiv)

ಲಭ್ಯವಿರುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ, ಮಾಹಿತಿಗೆ ಸಂಬಂಧಿಸಿದ ವಿವರ.

ಎಲೆಕ್ಟ್ರಾನಿಕ್ ಮಾದರಿ	ವಿವರಗಳು (ಸೈಟ್ ಆರ್ಡರ್/ ಲಭ್ಯವಿರುವ ಸ್ಥಳದ ಮಾಹಿತಿ ಇತ್ಯಾದಿ)	ಶೀರ್ಷಿಕೆ ಅಥವಾ ವಸ್ತು ವಿಷಯಗಳು	ಮಾಹಿತಿಯನ್ನು ಒದಗಿಸುವ ಅಧಿಕಾರಿಯ ಹೆಸರು ಹುದ್ದೆ ಮತ್ತು ವಿಳಾಸ
ಸದ್ಯಕ್ಕೆ ಲಭ್ಯವಿರುವುದಿಲ್ಲ.			

ಅಧ್ಯಾಯ–15

ಕಲಂ 4(1) (b)(xv)

ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ.

ಕಛೇರಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಕೌಂಟರನ್ನು ತೆರೆಯಲಾಗಿರುತ್ತದೆ ಹಾಗೂ ಸೂಕ್ತ ಹಿಂಬರಹದ ಮೂಲಕ ಸಹ ಅರ್ಜಿದಾರರಿಗೆ ತಿಳಿಸಲಾಗುತ್ತದೆ. ಮಾಹಿತಿ ಹಕ್ಕು ಕಾಯ್ದೆ 2005ರಂತೆ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ

ಸಕ್ಷಮ ಪ್ರಾಧಿಕಾರವೆಂದು ಘೋಷಿಸಲ್ಪಟ್ಟಿರುವ ಕಛೇರಿ ಸಹಾಯಕರನ್ನು ಸಹಾಯಕ ಸಾರ್ವಜನಿಕ ಮಾಹಿತಿ (ಸಂಪರ್ಕ) ಅಧಿಕಾರಿ ಎಂದು ಕರೆದು ನಿಯಮಗಳಂತೆ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ.

ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಮಾಹಿತಿ ಕೇಂದ್ರ ತೆರೆದು ಇಲಾಖೆಯಲ್ಲಿ ಆಗಲಿರುವ ಎಲ್ಲಾ ಕಾರ್ಯಗಳ ಅರ್ಜಿ ನಮೂನೆ ಮಂಜೂರಾತಿಗೆ ನೀಡಲಾಗುವ ಕಾಲಾವಧಿ ನಿಗಧಿ ಇತ್ಯಾದಿ ವಿಚಾರಗಳನ್ನು ಸಾರ್ವಜನಿಕರಿಗೆ ತಿಳಿಸುವಂತಹ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಆಡಳಿತ ನಿರ್ವಹಣೆ ನಿಟ್ಟಿನಲ್ಲಿ ಜಿಲ್ಲಾ ವೆಬ್‌ಸೈಟ್ ಸೃಷ್ಟಿಸಲು ಮತ್ತು ಕಡತಗಳನ್ನು ಕಂಪ್ಯೂಟರ್ ಮೂಲಕವೇ ನಿರ್ವಹಿಸುವಂತಹ ಯೋಜನೆಯನ್ನು ಸರ್ಕಾರದಿಂದ ಅಂಗೀಕೃತ ಪಡೆದು ನಿರ್ವಹಿಸಲಾಗುವುದು ಹಾಗೂ ಜಿಲ್ಲೆಯ ಎಲ್ಲಾ ಕಂದಾಯ ಕಛೇರಿಗಳನ್ನು ಇಂಟರ್‌ನೆಟ್ ಸೌಲಭ್ಯ ಅಳವಡಿಸುವ ಸಂಬಂಧ ಸರ್ಕಾರದ ಅನುಮತಿಗಾಗಿ ಕಾಯಲಾಗುತ್ತಿದೆ.

ಸಾರ್ವಜನಿಕರು ದಸ್ತಾವೇಜು ಪ್ರತಿಗಳನ್ನು ಆದೇಶದ ನಕಲುಗಳನ್ನು ಪಡೆಯಲು ಇಚ್ಚಿಸಿದಲ್ಲಿ ಅರ್ಜಿಯನ್ನು ಕಾರ್ಯಾಲಯದ ಸಕ್ಷಮ ಪ್ರಾಧಿಕಾರ ಆದ ಕಛೇರಿ ಸಹಾಯಕರಿಗೆ ಸಲ್ಲಿಸಿ ಇದಕ್ಕಾಗಿ ನಿಗದಿಪಡಿಸಿದ ಶುಲ್ಕವನ್ನು ತುಂಬಿ ಗರಿಷ್ಠ 7 ದಿನಗಳ ಒಳಗಾಗಿ ನಕಲು ಪ್ರತಿಗಳನ್ನು ಪಡೆಯುವ ಸೌಲಭ್ಯವನ್ನು ಒದಗಿಸಲಾಗಿದೆ. ವಹಿಗಳಲ್ಲಿ ನಮೂದಿಸಿ ಸಂಬಂಧಪಟ್ಟ ವಿಷಯ ನಿರ್ವಾಹಕರಿಗೆ ಸ್ವೀಕೃತಿ ಪಡೆದು ಪತ್ರಗಳನ್ನು ನೀಡಲಾಗುವುದು ಹಾಗೂ ಸಾರ್ವಜನಿಕ ಮನವಿ ಬಗ್ಗೆ ಪ್ರತ್ಯೇಕ ಸ್ವೀಕೃತಿ ಪತ್ರವನ್ನು ನೀಡಲಾಗುತ್ತದೆ.

ಅಧ್ಯಾಯ–16

ಕಲಂ 4(1) (b)(xvi)

ಅಧಿಸೂಚನೆ

ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 4.(1) (b) ಅನುಸಾರ ಪ್ರಕಟಿಸಬೇಕಾದ ವಿವರಗಳು.

ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 5(1), 5(2) ಮತ್ತು 19(1)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕಂದಾಯ ಇಲಾಖೆಗೆ ಸೇರಿದ ಜಿಲ್ಲಾಧಿಕಾರಿಯವರ ಕಛೇರಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು, ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಕ್ರಮವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಈ ಕೆಳಕಾಣಿಸಿದಂತೆ ಸರ್ಕಾರದಿಂದ ನೇಮಿಸಲಾಗಿದೆ.

ಕ್ರಮ ಸಂಖ್ಯೆ	ಕಛೇರಿಯ ಹೆಸರು	ಮಾಹಿತಿ ಹಕ್ಕು ಕಾಯ್ದೆ 2005 ಕಲಂ 5(1)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 5(2)ರ ಪ್ರಕಾರ ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ	ಮಾಹಿತಿ ಹಕ್ಕು ಕಾಯ್ದೆ 2005ರ ಕಲಂ 19(1)ರ ಪ್ರಕಾರ ಮೇಲ್ಮನವಿ ಪ್ರಾಧಿಕಾರ
1.	ಜಿಲ್ಲಾಧಿಕಾರಿ ಹಾಗೂ ಜಿಲ್ಲಾದಂಡಾದಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೊಡಿಯಂ ಬ್ಲಾಕ್, ಡಾ॥ ಅಂಬೇಡ್ಕರ್ ರಸ್ತೆ, ಬೆಂಗಳೂರು –560001.	ಶ್ರೀ ಆರ್.ಶ್ರೀನಿವಾಸ, ಕೆ.ಎ.ಎಸ್., ಅಪರ ಜಿಲ್ಲಾಧಿಕಾರಿ, ಬೆಂಗಳೂರು (ಗ್ರಾ.) ಜಿಲ್ಲೆ, ಬೆಂಗಳೂರು.	ಶ್ರೀಮತಿ ಪ್ರಜ್ಞಾ ಅಮ್ಮೆಂಬಾಳ್, ಕೆ.ಎ.ಎಸ್., ಕಛೇರಿ ಸಹಾಯಕರು, ಜಿಲ್ಲಾಧಿಕಾರಿಯವರ ಕಾರ್ಯಾಲಯ, ಬೆಂಗಳೂರು (ಗ್ರಾ.) ಜಿಲ್ಲೆ, ಬೆಂಗಳೂರು.	ಶ್ರೀ ಆರ್.ಕೆ.ರಾಜು ಭಾ.ಆ.ಸೇ., ಜಿಲ್ಲಾಧಿಕಾರಿ ಹಾಗೂ ಜಿಲ್ಲಾದಂಡಾಧಿಕಾರಿ ಬೆಂಗಳೂರು (ಗ್ರಾ.) ಜಿಲ್ಲೆ, ಬೆಂಗಳೂರು.

ಅಧ್ಯಾಯ–17

ಕಲಂ 4(1) (b)(xvii)

ನಿರ್ಧಿಷ್ಟ ಪಡಿಸಬಹುದಾದಂಥ ಇತರೆ ಮಾಹಿತಿಗಳು.

ನಾಗರೀಕರಿಗೆ ಉಪಯೋಗವಾಗುವ ಪ್ರಕಟಿಸಲಾದ ಇತರೆ ಮಾಹಿತಿ ಅಥವಾ ಪ್ರಕಟಣೆಗಳು.

ಯಾವುದೂ ಇರುವುದಿಲ್ಲ.

ಸಹಿ/–

ಪಿ.ಆರ್.417

ಆರ್.ಕೆ.ರಾಜು

ಜಿಲ್ಲಾಧಿಕಾರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ,

ಕಂದಾಯ ಇಲಾಖೆ

ಅಧಿಕೃತ ಜ್ಞಾಪನ

ಸಂಖ್ಯೆ:ಆರ್‌ಡಿ 402 ಆರ್‌ಎಂಇ 2009, ಬೆಂಗಳೂರು,ದಿನಾಂಕ:17ನೇ ಫೆಬ್ರವರಿ, 2010

ವಿಷಯ: ದಿ:1-1-2009ರಂದು ಇದ್ದಂತೆ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಸಹಾಯಕ ನಿಬಂಧಕರ ವೃಂದದ ಸೇವಾ ಜೇಷ್ಠತೆಯ ಪುನರ್ ವಿಮರ್ಶಿತ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:1) ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು ರವರ ಪ್ರಸ್ತಾವನೆ ಸಂಖ್ಯೆ: ಸಿ.2:ಸಿಆರ್-14:2009, ದಿ:15-6-2009 ಮತ್ತು 5-8-2009.

2) ಇದೇ ಸಮಸಂಖ್ಯೆ ಅ.ಜ್ಞಾ ದಿನಾಂಕ 14-12-2009

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ನಿಬಂಧಕರು ಉಲ್ಲೇಖ (1)ರ ಪ್ರಸ್ತಾವನೆಯಲ್ಲಿ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಸಹಾಯಕ ನಿಬಂಧಕರುಗಳ ವೃಂದದ ಪುನರ್ವಿಮರ್ಶಿತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವಂತೆ ಕೋರಿದ್ದುದ್ದರ ಹಿನ್ನೆಲೆಯಲ್ಲಿ ಕ್ರಮ ಸಂಖ್ಯೆ (1) ರಿಂದ (16)ರವರೆಗೆ ನೀಡಿರುವ ಎಲ್ಲಾ ಮುಂಬಡ್ತಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ನಿಯಮ 10ರನ್ವಯ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಸಹಾಯಕ ನಿಬಂಧಕರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (2)ರ ಅಧಿಕೃತ ಜ್ಞಾಪನದ ಅನುಬಂಧ (1)ರಲ್ಲಿರುವಂತೆ ಪ್ರಕಟಿಸಿ ಆಕ್ಷೇಪಣೆಗಳನ್ನು ಲಿಖಿತ ಮೂಲಕ ಸಲ್ಲಿಸುವಂತೆ ಕೋರಲಾಗಿತ್ತು.

ದಿನಾಂಕ 14-12-2009ರಂದು ಪ್ರಕಟಿಸಲಾಗಿರುವ ಸಹಾಯಕ ನಿಬಂಧಕರುಗಳ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಮೇಲೆ ಯಾವುದೇ ಆಕ್ಷೇಪಣೆಗಳು ಸ್ವೀಕೃತಿಯಾಗಿರುವುದಿಲ್ಲ.

ದಿನಾಂಕ 1-1-2009ರಲ್ಲಿದ್ದಂತೆ, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಸಹಾಯಕ ನಿಬಂಧಕರುಗಳ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಸರ್ಕಾರವು ಪರಿಶೀಲಿಸಿ, ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಗಳು 1957ರ ನಿಯಮ 10ರನ್ವಯ ಒಪ್ಪಿ, ಅನುಬಂಧ (1)ರಲ್ಲಿರುವಂತೆ ಅಂತಿಮಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರಾಮಚಂದ್ರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ (ಕೆಎಟಿ ಮತ್ತು ಬಾನಿವಿ)

ಅನುಬಂಧ-1

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಸಹಾಯಕ ನಿಬಂಧಕರ ವೃಂದದ ಪುನರ್ ವಿಮರ್ಶಿತ ಅಂತಿಮ ಜೇಷ್ಠತಾ ಪಟ್ಟಿ - ದಿನಾಂಕ:1-1-2009 ರಲ್ಲಿದ್ದಂತೆ-

ಕ್ರಮ ಸಂಖ್ಯೆ	ಹೆಸರು ಶ್ರೀ:ಶ್ರೀಮತಿ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ:	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ಜೇಷ್ಠತೆಗೆ ಅರ್ಹವಾದ ದಿನಾಂಕ:	ಷರಾ
1	ಎಸ್.ಶಂಕರರಾವ್	13-6-1926	05-08-1950	02-06-1981	02-06-1981	ನಿವೃತ್ತಿ
2	ಎಂ.ಬಿ.ಹುದ್ದಾರ್	04-01-1927	12-10-1951	02-06-1981	02-06-1981	ನಿವೃತ್ತಿ
3	ಕೆ.ಜಿ.ಗೋಪಾಲ್‌ರಾವ್	08-01-1933	01-10-1958	12-11-1981	12-11-1981	ನಿವೃತ್ತಿ
4	ಟಿ.ಎನ್.ಹಂಪಿಹೊಳಿ	06-04-1931	21-09-1955	11-05-1982	11-05-1982	ನಿವೃತ್ತಿ
5	ಎಸ್.ಎಂ.ಮೋಹನ್	15-05-1938	25-03-1960	30-09-1989	16-06-1983	ನಿವೃತ್ತಿ
6	ಟಿ.ಲಕ್ಷ್ಮಿದೇವಿ	08-08-1940	20-07-1961	01-11-1995	30-09-1989	ನಿವೃತ್ತಿ

ಕ್ರಮ ಸಂಖ್ಯೆ	ಹೆಸರು ಶ್ರೀ:ಶ್ರೀಮತಿ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ:	ನೈಜವಾಗಿ ಮುಂಬಡ್ತಿ ಹೊಂದಿದ ದಿನಾಂಕ	ಜೇಷ್ಠತೆಗೆ ಅರ್ಹವಾದ ದಿನಾಂಕ:	ಷರಾ
7	ಮೊಹಮ್ಮದ್ ಚಾಂದ್ ಪಾಷ	04-06-1934	18-02-1952	16-06-1988	01-10-1991	ನಿವೃತ್ತಿ
8	ಹೆಚ್.ಕೆ.ಶ್ರೀನಿವಾಸ ಮೂರ್ತಿ	26-10-1939	13-05-1958	05-08-1992	05-08-1992	ನಿವೃತ್ತಿ
9	ಮೊಹಮ್ಮದ್ ಇಬ್ರಾಹಿಂ	05-05-1937	04-05-1966	28-02-1995	28-02-1995	ನಿವೃತ್ತಿ
10	ಜಿ.ಎಸ್.ಹಿರೇಮಠ್	05-04-1938	18-08-1961	28-02-1995	01-11-1995	ನಿವೃತ್ತಿ
11	ಸೈಯದ್ ಮೊಹಮ್ಮದ್ ಹಮೀದ್	05-05-1938	04-03-1965	31-05-1996	31-05-1996	ನಿವೃತ್ತಿ
12	ರಂಗಧಾಮಯ್ಯ	27-12-1943	9-10-1967 01-12-1969	27-04-1998	19-06-1996	ನಿವೃತ್ತಿ
13	ಎ.ಎಲ್.ಕುಂದರಗಿ	16-05-1953	28-02-1977	04-11-2002	13-08-1997	ಉಪನಿಬಂಧಕ ರಾಗಿ ಬಡ್ತಿ ಹೊಂದಿದ್ದಾರೆ. ಆರ್‌ಡಿ 204 ಆರ್‌ಎಂಇ 2005 ದಿ:26-12-2007
14	ವಿ.ಮುನಿವೆಂಕಟೇಶ್	12-01-1950	23-08-1971 5-2-1981	30-10-1998	30-10-1998	
15	ಎಸ್.ರಾಜಶೇಖರ್	27-10-1954	28-3-1977 11-08-1980	4-11-2002	4-11-2002	ಸ್ವಯಂ ನಿವೃತ್ತಿ
16	ಆರ್.ಎನ್.ರುಕ್ಮಿಣಿಯಮ್ಮ	10-07-1956	16-01-1984	26-12-2007	26-12-2007	ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆ

ಆರ್‌ಡಿ 402 ಆರ್‌ಎಂಇ 2009

ರಾಮಚಂದ್ರಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಕೆಎಟಿ ಮತ್ತು ಬಾನಿ)

ಪಿ.ಆರ್.352

ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಪುಸ್ತಕ ಮಳಿಗೆ, ಬಹುಮಹಡಿ ಕಟ್ಟಡ, ಬೆಂಗಳೂರು–560 001

ಅಧಿಸೂಚನೆ

2009–10ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆಯ ಪ್ರಯುಕ್ತ ಬೆಂಗಳೂರಿನಲ್ಲಿರುವ ಸರ್ಕಾರಿ ಕೇಂದ್ರ ಪುಸ್ತಕ ಮಳಿಗೆಯಲ್ಲಿ ದಿನಾಂಕ:01.04.2010 ರಿಂದ 24.04.2010 ರವರೆಗೆ ಎಲ್ಲಾ ಸಾರ್ವಜನಿಕರಿಗೆ ಹಾಗೂ ಸರ್ಕಾರಿ ಕಛೇರಿಗಳಿಗೆ ಪುಸ್ತಕ ಮತ್ತು ಪ್ರಕಟಣೆಗಳ ಮಾರಾಟವನ್ನು ನಿಲ್ಲಿಸಲಾಗುತ್ತಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಎಂ. ರವಿಶಂಕರ್
ನಿರ್ದೇಶಕರು.

OFFICE OF THE DIRECTOR OF PRINTING STATIONERY AND PUBLICATION GOVERNMENT BOOK DEPOT, M.S. BUILDING, BANGALORE-560 001

NOTIFICATION

It is hereby notified for the information of all Publics & Government Office that there will be no Sales of Books & publication from the Government Book Depot Bangalore from 01.04.2010 to 24.04.2010 (Both days inclusive) on account of Annual Stock Verification for the year 2009-2010.

M. Ravishankar
Director.

PR-431

OFFICE OF THE LOCAL VAT OFFICE-150, BANGALORE
(Notified Authority under Rule 6(i) of the CST (Karnataka) Rules 1957

NOTIFICATION

No.TIN 29210081716, Dated:

By virtue of the provisions of Rule 12(2) of the CST (Registration & Turnover) Rules, 1957, and Rule 6(e) and 6(i) of the CST (Karnataka) Rules, 1957, it is hereby notified for general information that the declaration in Form 'C/H/F' described below are declared to be obsolete and invalid.

Sl. No.	Name of the declaration Form declared obsolete & invalid	Name & Address of the dealer to whom forms were issued by the Department	To Whom the forms were issued by the dealer	Date from which declared obsolete & Reasons	Name of the Circle issuing the Form	Reasons
1.	Form-C No.TCK-R 4340325	Siddhartha Engineering Limited, No.251, 1st Main, 7th Cross, HIG Colony, RMV 2nd Stage, Bangalore-94	G.R.Power Switchgear Ltd., Hyderabad	2006-07	ACCT, LVO-150, Bangalore	Lost by GR Power Switchgear Ltd., Hyderabad.

Assistant Commissioner of
Commercial Taxes, (LVO-150),
Bangalore.

Proceedings of the Assistant Commissioner of Commercial Taxes, LVO-150
Seshadripuram, Bangalore, Dated:3rd March, 2010

Present: Sri S.J. Harish Kumar Malhotra, ACCT.

Sub: Loss of C-Forms in the case of Siddhartha Engineering Limited, Bangalore.

Ref: Letter from the dealer Dated:15.11.2008 regarding loss of C-Forms bearing No. TCK-R 4340325.

Preamble:

Siddhartha Engineering Limited, No.251, 1st Main, 7th Cross, HIG Colony, RMV 2nd Stage, Bangalore-94, bearing TIN 29210081716, is a registered dealer borne on the files of this office. The dealer in his letter cited at reference above, has intimated this office that they have lost one C-Form bearing No.TCK-R 4340325 issued by this office.

The dealer has adduced the proof for having filed the complaint to the Police Authorities for loss of the above C-Forms and executed the Indemnity Bond in favour of the Government as laid down under Rule 12(2) and 12(9) of CST Act, 1956.

In the instant case, since the above mentioned C-Form No.TCK-R 4340325 is stated to be lost, the form so lost is treated as invalid. Hence this order.

Order No.ACCT, LVO-150/01/2009-10, Dated:4th March, 2010

In view of the above discussions, it is hereby ordered that C-Form No.TCK-R 4340325, is declared as obsolete and invalid.

Assistant Commissioner of
Commercial Taxes, (LVO-150),
Bangalore.

PR-381

OFFICE OF THE LOCAL VAT OFFICE-150, BANGALORE
(Notified Authority under Rule 6(i) of the CST (Karnataka) Rules 1957
NOTIFICATION
No.TIN 29790072473, Dated:

By virtue of the provisions of Rule 12(2) of the CST (Registration & Turnover) Rules, 1957, and Rule 6(e) and 6(i) of the CST (Karnataka) Rules, 1957, it is hereby notified for general information that the declaration in Form 'C/H/F' described below are declared to be obsolete and invalid.

Sl. No.	Name of the declaration Form declared obsolete & invalid	Name & Address of the dealer to whom forms were issued by the Department	To Whom the forms were issued by the dealer	Date from which declared obsolete & Reasons	Name of the Circle issuing the Form	Reasons
1.	Form-C No.1531958	Esjay United, No.35-A-1, 7th Cross, UAS Layout, RMV II Stage, Bangalore-94	ITW Chemin Ltd., Pashamylaram, Andhra Pradesh	2006-07	ACCT, LVO-150, Bangalore	Lost by M/s. ITW Chemin Ltd.
2.	No.1531959					
3.	No.4337929					
4.	No.4337930					

Assistant Commissioner of
Commercial Taxes, (LVO-150),
Bangalore.

Proceedings of the Assistant Commissioner of Commercial Taxes, LVO-150
Seshadripuram, Bangalore, Dated:3rd March, 2010

Present: Sri S.J. Harish Kumar Malhotra, ACCT.

Sub: Loss of C-Forms in the case of M/s. Esjay United, Bangalore.

Ref: Letter from the dealer Dated:18.12.2008 regarding loss of C-Forms bearing No. 1531958, 1531959, 4337929 & 4337930.

Preamble:

M/s Esjay United, No.35-A-1, 7th Cross, UAS Layout, RMV II Stage, Bangalore-94, bearing TIN 29790072473, is a registered dealer borne on the files of this office. The dealer in his letter cited at reference above, has intimated this office that they have lost four C-Forms bearing No.1531958, 1531959, 4337929 & 4337930 issued by this office.

The dealer has adduced the proof for having filed the complaint to the Police Authorities for loss of the above C-Forms and executed the Indemnity Bond in favour of the Government as laid down under Rule 12(2) and 12(9) of CST Act, 1956.

In the instant case, since the above mentioned four C-Forms C-Forms bearing No.1531958, 1531959, 4337929 & 4337930 is stated to be lost, the form so lost is teated as invalid. Hence this order.

Order No.ACCT, LVO-150/01/2009-10, Dated:4th March, 2010

In view of the above discussions, it is hereby ordered that four C-Forms bearing C-Forms bearing No.1531958, 1531959, 4337929 & 4337930, are declared as obsolete and invalid.

Assistant Commissioner of Commercial
Taxes, (LVO-150), Bangalore.

PR-382

OFFICE OF THE LOCAL VAT OFFICE-150, BANGALORE
(Notified Authority under Rule 6(i) of the CST (Karnataka) Rules 1957
NOTIFICATION
No.TIN 29360118833, Dated:

By virtue of the provisions of Rule 12(2) of the CST (Registration & Turnover) Rules, 1957, and Rule 6(e) and 6(i) of the CST (Karnataka) Rules, 1957, it is hereby notified for general information that the declaration in Form 'C/H/F' described below are declared to be obsolete and invalid.

Sl. No.	Name of the declaration Form declared obsolete & invalid	Name & Address of the dealer to whom forms were issued by the Department	To Whom the forms were issued by the dealer	Date from which declared obsolete & Reasons	Name of the Circle issuing the Form	Reasons
1.	Form-C No.0051337	M/s. Global Communications, No.1, 5th Main, Krishnappa Block, Ganganagar, R.T. Nagar Post, Bangalore-32.	Not issued	24.06.2008	ACCT LVO-150, Bangalore	Lost in Transit

Assistant Commissioner of
Commercial Taxes, (LVO-150),
Bangalore.

Proceedings of the Assistant Commissioner of Commercial Taxes, LVO-150 Seshadripuram, Bangalore, Dated:3rd March, 2010

Present: Sri S.J. Harish Kumar Malhotra, ACCT.

Sub: Loss of C-Forms in the case of M/s. Global Communications, Bangalore.

Ref: Letter from the dealer Dated:15.11.2008 regarding loss of C-Forms bearing No. 0051337.

Preamble:

M/s. Global Communications, No.1, 5th Main, Krishnappa Block, Ganga Nagar, RT Nagar Post, Bangalore-32, bearing TIN-29360118833, is a registered dealer borne on the files of this office. The dealer in his letter cited at reference above, has intimated this office that they have lost one C-Form bearing No.0051337 issued by this office.

The dealer has adduced the proof for having filed the complaint to the Police Authorities for loss of the above C-Forms and executed the Indemnity Bond in favour of the Government as laid down under Rule 12(2) and 12(9) of CST Act, 1956.

In the instant case, since the above mentioned C-Form No.0051337 is stated to be lost, the form so lost is treated as invalid. Hence this order.

Order No.ACCT, LVO-150/01/2009-10, Dated:4th March, 2010

In view of the above discussions, it is hereby ordered that C-Forms No.0051337, is declared as obsolete and invalid.

Assistant Commissioner of Commercial Taxes, (LVO-150), Bangalore.

PR-383

ಸಹಕಾರ ಇಲಾಖೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ, ತುಮಕೂರು ಇವರ ಕಾರ್ಯವಾಹಿಗಳು

ಅಮಲ್ಜಾರಿ ಸಂಖ್ಯೆ:63/2003–2004

ಬಿಡ್‌ದಾರರು: ಶ್ರೀ ರತ್ನರಾಜು ಬಿ.ಎ. ಬಿನ್, ಬಿ.ಪಿ. ಅನಂತರಾಜಪ್ಪ, ತುಮಕೂರು

ಡಿಕ್ರಿ ಹೋಲ್ಡರ್	ವಿರುದ್ಧ	ತೀರ್ಪು ಋಣಿ
ವ್ಯವಸ್ಥಾಪಕರು ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು.		1) ಎಸ್. ಸುಮ ಕೋಂ ಬಿ.ಕೆ. ರಮೇಶ್ ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿ ನಗರ, ತುಮಕೂರು. 2) ಬಿ.ಕೆ. ರಮೇಶ್ ಬಿನ್ ಬಿ.ಆರ್. ಕೆಂಚಪ್ಪ ಶೆಟ್ಟಿಹಳ್ಳಿ ಮುಖ್ಯರಸ್ಗೆ, ಮಾರುತಿನಗರ, ತುಮಕೂರು.

ಪ್ರಸ್ತಾವನೆ:

ವ್ಯವಸ್ಥಾಪಕರು ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು, ಇವರು ತೀರ್ಪುಋಣಿಯಿಂದ ವಸೂಲಾಗಬೇಕಾದ ವ್ಯಾಪಾರಾಭಿವೃದ್ಧಿ ಸಾಲ ರೂ.1,33,005=00 ಗಳಿಗೆ ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ, ತುಮಕೂರು ಇವರ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ದಾವೆ ನಂ.ಡಿ.ಆರ್.ಟಿ.335/2002–03, ದಿನಾಂಕ:27.01.2003ರ ರೀತ್ಯಾ ಡಿಕ್ರಿ ಪಡೆದಿದ್ದು, ಡಿಕ್ರಿ ಪಡೆಯುವ ಮುನ್ನ ಎದುರುದಾರಿಗೆ ಅಂದರೆ ಶ್ರೀಮತಿ ಎಸ್.ಸುಮ ಕೋಂ ಬಿ.ಕೆ. ರಮೇಶ್ ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿನಗರ, ತುಮಕೂರು ಮತ್ತು ಶ್ರೀ ಬಿ.ಕೆ. ರಮೇಶ್, ಬಿನ್ ಬಿ.ಹೆಚ್. ಕೆಂಚಪ್ಪ, ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿನಗರ, ತುಮಕೂರು ರವರಿಗೆ ತಿಳುವಳಿಕೆಪತ್ರ ನೀಡಿದ್ದು, ಸ್ವೀಕೃತಿಯಾಗಿರುತ್ತದೆ. ಆದರೆ ವಿಚಾರಣೆಗೆ ಎದುರು ಅರ್ಜಿದಾರರು ಗೈರುಹಾಜರಾಗಿದ್ದು, ಏಕಪಕ್ಷೀಯವಾಗಿ ತೀರ್ಪು ನೀಡಿರುತ್ತಾರೆ. ನಂತರ ಅಮಲ್ಜಾರಿ ಅರ್ಜಿ ಹಾಕಿದ್ದು, ಸದರಿ ಅಮಲ್ಜಾರಿ ಅರ್ಜಿ ಸಂಖ್ಯೆ:63/2003–2004, ದಿನಾಂಕ:04.07.2003 ಮೊಬಲಗು ರೂ.1,46,370=00, ಸದರಿ ಅಮಲ್ಜಾರಿಯನ್ನು ಬ್ಯಾಂಕಿನ ಮಾರಾಟಾಧಿಕಾರಿಗಳಿಗೆ ವಹಿಸಿದ್ದು, ಸುಸ್ತಿದಾರರಿಂದ ಬಾಕಿ ಹಣದ ವಸೂಲಾತಿಗಾಗಿ ಬ್ಯಾಂಕಿಗೆ ಆಧಾರ ಮಾಡಿಕೊಟ್ಟ ಸ್ಥಿರ ಸ್ವತ್ತನ್ನು ಹರಾಜಿನ ಮೂಲಕ ಮಾರಾಟ ಮಾಡಲು ನಮೂನೆ 8 ಮತ್ತು 9ನ್ನು ದಿನಾಂಕ:03.10.2003, ದಿನಾಂಕ:17.07.2004, ದಿನಾಂಕ:31.01.2005, ದಿನಾಂಕ:15.10.2005, ದಿನಾಂಕ:12.12.2007, ದಿನಾಂಕ:29.04.2009 ರ ದಿನಾಂಕಗಳ ನೋಟಿಸ್‌ಗಳನ್ನು ತೀರ್ಪುಋಣಿದಾರರಿಗೆ ಜಾರಿಮಾಡಲಾಗಿರುವುದನ್ನು ಗಮನಿಸಲಾಗಿದೆ. ಮತ್ತು ನಿಗದಿ ಪಡಿಸಿದ ದಿನಾಂಕಗಳಂದು ಸ್ಥಿರ ಸ್ವತ್ತಿನ ಹರಾಜು ತೀರ್ಪುಋಣಿದಾರರ ಕೋರಿಕೆಯಂತೆ ಹರಾಜು ನಡೆಸದಿಲ್ಲದಿರುವುದನ್ನು ಸಹ ಗಮನಿಸಲಾಗಿದೆ. ಮುಂದುವರೆದು ಹರಾಜು ಪ್ರಕ್ರಿಯೆಗೆ ಮುನ್ನ ಪ್ರಜಾಪ್ರಗತಿ

ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಿರುವುದನ್ನು ಸಹ ಗಮನಿಸಲಾಗಿದೆ. ಅಂತಿಮವಾಗಿ ದಿನಾಂಕ:10.10.2009ಕ್ಕೆ ನಿಗದಿಪಡಿಸಿದ್ದು, ಈ ಸಂಬಂಧ ದಿನಾಂಕ:24.09.2009ರ ಫಾರಂ ನಂ.8 ಮತ್ತು 9ನ್ನು ತೀರ್ಪುಋಣಿದಾರರಿಗೆ ಜಾರಿಯಾಗಿದ್ದು ಸಹಿ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ದಿನದಂದು ನಡೆಸುವ ಹರಾಜಿನ ಬಗ್ಗೆ ಪ್ರಕಟಣೆಯನ್ನು ದಿನಾಂಕ:08.10.2009ರ ಪ್ರಜಾಪ್ರಗತಿ ದಿನ ಪತ್ರಿಕೆಯಲ್ಲಿಯ ಸಹ ಪ್ರಕಟಣೆಯಾಗಿರುತ್ತದೆ. ರೂ.2,76,213=00 ಗಳು ಡಿಕ್ರಿ ಹೋಲ್ಡರ್ ಸಹಕಾರ ಬ್ಯಾಂಕಿಗೆ ತೀರ್ಪುಋಣಿದಾರರಿಂದ ಬರಬೇಕಾಗಿರುತ್ತದೆ. ಆದರೂ ಶ್ರೀಮತಿ ಎಸ್.ಸುಮ ಕೋಂ ಬಿ.ಕೆ. ರಮೇಶ್ ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿ ನಗರ, ತುಮಕೂರು ಮತ್ತು ಎರಡನೇ ಎದುರುದಾರರಾದ ಶ್ರೀ ಬಿ.ಕೆ. ರಮೇಶ್ ಬಿನ್ ಬಿ.ಹೆಚ್. ಕೆಂಚಪ್ಪ, ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿನಗರ, ತುಮಕೂರು ತೀರ್ಪುಋಣಿರವರು ತಮ್ಮ ಸುಸ್ತಿ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲವೆಂಬ ಅಂಶವನ್ನು ಈ ನ್ಯಾಯಾಲಯವು ಪರಿಶೀಲಿಸಿದೆ.

ಆದ ಕಾರಣ ಬ್ಯಾಂಕಿನ ಮಾರಾಟಾಧಿಕಾರಿಗಳು ತೀರ್ಪುಋಣಿಯ ಸ್ಥಿರ ಸ್ವತ್ತನ್ನು ದಿನಾಂಕ:10.10.2009ರಂದು ನಡೆದ ಬಹಿರಂಗ ಹರಾಜಿನಲ್ಲಿ, ಅತ್ಯಧಿಕ ಬಿಡ್‌ದಾರರಾದ ಶ್ರೀ ರತ್ನರಾಜು ಬಿ.ಎ. ಬಿನ್ ಬಿ.ಪಿ. ಅನಂತರಾಜಪ್ಪ, ಶ್ರೀ ಪಾರ್ಶ್ವನಾಥ ಸ್ಟೋರ್ಸ್ ಎಸ್.ಎಸ್.ಪುರಂ, ತುಮಕೂರು ಇವರಿಗೆ ಸ್ಥಿರ ಸ್ವತ್ತನ್ನು ರೂ.5,50,000=00 ಗಳಿಗೆ ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಿ, ಹರಾಜು ಸ್ಥಿರೀಕರಣಕ್ಕಾಗಿ ಪ್ರಸ್ತಾವೆಯನ್ನು ದಿನಾಂಕ:09.11.2009 ಬ್ಯಾಂಕಿನ ಮಾರಾಟಾಧಿಕಾರಿಗಳು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಸ್ವತ್ತು ಹರಾಜಾದ 30 ದಿನಗಳೊಳಗೆ, ಆಸ್ತಿಯ ಒಡೆತನವನ್ನು ಹೊಂದಿರುವ ಅಥವಾ ಆಸ್ತಿಯ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳಿಂದ ಸಹಕಾರಿ ನಿಯಮ 1960ರ ನಿಯಮ 38(4) (ಎ) ರೀತಿ ನಿಯಮಾನುಸಾರ ಠೇವಣಿ ಮಾಡಿ, ಮಾರಾಟವನ್ನು ರದ್ದುಗೊಳಿಸುವಂತೆ ಕೋರಿ, ಯಾವ ವಿಧವಾದ ಅರ್ಜಿಯು ಬಂದಿಲ್ಲದ ಪ್ರಯುಕ್ತ, ಹಾಗೂ ಈ ಕುರಿತು ಸುಸ್ತಿಸಾಲಬಾಕಿ ಇರುವ ತೀರ್ಪುಋಣಿಗಳಿಗೆ ತಿಳುವಳಿಕೆ ನೀಡಲು ಕಾಯಿದೆಯಲ್ಲಿ ಅವಕಾಶವಿಲ್ಲದಿದ್ದರೂ ಸಹ ತೀರ್ಪುಋಣಿಗಳಾದ ಶ್ರೀಮತಿ ಸುಮ ಕೋಂ ಬಿ.ಕೆ. ರಮೇಶ್ ರವರಿಗೆ ಈ ಕಛೇರಿಯಿಂದ ದಿನಾಂಕ:24.12.2009 ರಂದು ನೋಟೀಸ್‌ನ್ನು ರಿಜಿಸ್ಟರ್ ಅಂಚೆಯ ಮೂಲಕ ಕಳುಹಿಸಲಾಗಿತ್ತು. ರಿಜಿಸ್ಟರ್ ಅಂಚೆಯು ಹಿಂತಿರುಗಿ ಬಂದಿರುತ್ತದೆ. ಆದ್ದರಿಂದ ಈ ಕುರಿತು ಯಾವುದೇ ವಿಧವಾದ ಲಿಖಿತ ಆಕ್ಷೇಪಣೆಗಳು ಬಂದಿಲ್ಲವಾದ್ದರಿಂದ ಸದರಿ ಸ್ಥಿರಾಸ್ತಿಯನ್ನು ಅತ್ಯಧಿಕ ಹಾಗೂ ಅಂತಿಮ ಬಿಡ್‌ದಾರರ ಹೆಸರಿಗೆ ಸ್ಥಿರೀಕರಣಗೊಳಿಸಲು ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ

ನಂ.ಸನಿ-32/ಎ.ಬಿ.ಎನ್/ಸ್ಥಿರಾಸ್ತಿವರ್ಗಾವಣೆ/ಸಿಆರ್-110/2009-2010, ದಿನಾಂಕ:24ನೇ ಫೆಬ್ರವರಿ, 2010

ಶ್ರೀ ಗೋಪಾಲರೆಡ್ಡಿ, ಕೆ.ಸಿ.ಎಸ್. ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು, ಆದ ನಾನು ಕರ್ನಾಟಕ ಸಹಕಾರ ಸಂಘಗಳ ನಿಬಂಧನೆ 1960ರ ನಿಯಮ 38(6) ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿ.ಎಂ.ಡಬ್ಲ್ಯೂ/69/ಸಿ.ಎಲ್.ಎಂ./2001, ದಿನಾಂಕ:21.11.2001ರ ಪ್ರಕಾರ ನನಗೆ ದತ್ತವಾಗಿರುವ ಅಧಿಕಾರದ ಮೇರೆಗೆ, ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು ಇದಕ್ಕೆ ತೀರ್ಪುಋಣಿಗಳಾದ ಶ್ರೀಮತಿ ಎಸ್.ಸುಮ ಕೋಂ ಬಿ.ಕೆ. ರಮೇಶ್, ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿನಗರ, ತುಮಕೂರು ಇವರ, ಷೆಡ್ಯೂಲ್‌ನಲ್ಲಿ ವಿವರಿಸಲಾದ ಸ್ಥಿರಾಸ್ತಿಯನ್ನು ದಿನಾಂಕ:10.10.2009 ರಂದು ನಡೆದ ಬಹಿರಂಗ ಹರಾಜಿನಲ್ಲಿ ಅತ್ಯಧಿಕ ಬಿಡ್‌ದಾರರಾದ, ಶ್ರೀ ರತ್ನರಾಜು ಬಿ.ಎ. ಬಿನ್ ಬಿ.ಪಿ. ಅನಂತರಾಜಪ್ಪ, ಶ್ರೀ ಪಾರ್ಶ್ವನಾಥ ಸ್ಟೋರ್ಸ್ ಎಸ್.ಎಸ್.ಪುರಂ, ತುಮಕೂರು, ರವರ ಹೆಸರಿಗೆ ಸ್ಥಿರೀಕರಿಸಿ ಆದೇಶಿಸಿರುತ್ತೇನೆ.

ಬಹಿರಂಗ ಹರಾಜಿನಲ್ಲಿ ಶ್ರೀ ರತ್ನರಾಜು ಬಿ.ಎ. ಬಿನ್ ಬಿ.ಪಿ. ಅನಂತರಾಜಪ್ಪ, ಶ್ರೀ ಪಾರ್ಶ್ವನಾಥ ಸ್ಟೋರ್ಸ್ ಎಸ್.ಎಸ್.ಪುರಂ, ತುಮಕೂರು ಡಿಕ್ರಿಹೋಲ್ಡರ್ ಬ್ಯಾಂಕಿಗೆ ಪಾವತಿಸಿದ ರೂ.5,50,000=00 ಗಳಲ್ಲಿ, ಡಿಕ್ರಿ ಹೋಲ್ಡರ್ ಬ್ಯಾಂಕಿಗೆ ಮಾರಾಟದ ಘೋಷಣೆಯಲ್ಲಿ ಯಾವ ಮೊಬಲಗಿನ ವಸೂಲಿಯ ಸಲುವಾಗಿ ಮಾರಾಟದ ಆದೇಶ ಮಾಡಲ್ಪಟ್ಟಿತ್ತೊ, ಆ ಮೊಬಲಗನ್ನು ಮತ್ತು ಅದರ ಮೇಲಿನ ಬಡ್ಡಿ ಮತ್ತು ಜಪ್ತಿ ವೆಚ್ಚಗಳನ್ನು, ತೀರ್ಪು ಋಣಿ, ಶ್ರೀಮತಿ ಎಸ್. ಸುಮ ಕೋಂ ಬಿ.ಕೆ. ರಮೇಶ್, ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿನಗರ, ತುಮಕೂರು ಇವರ ಸಾಲದ ಖಾತೆಗೆ ಜಮಾ ತೆಗೆದುಕೊಂಡು ಲೆಕ್ಕ ಮಾಡಿಕೊಳ್ಳಲು ಬ್ಯಾಂಕಿನ ವ್ಯವಸ್ಥಾಪಕರಿಗೆ ಆದೇಶಿಸಿದೆ. ಮತ್ತು ಬಾಕಿ ಋಣಿಯಿಂದ ಬಾಕಿ ಇರುವ ಸಾಲದ ಮೊತ್ತವನ್ನು ಜಮಾ ಮಾಡಿಕೊಂಡು, ಉಳಿದ ಮೊಬಲಗನ್ನು ತೀರ್ಪುಋಣಿಯ ಹೆಸರಿನಲ್ಲಿ ಅಮಾನತ್ ಖಾತೆಯಲ್ಲಿಟ್ಟುಕೊಳ್ಳಲು ಹಾಗೂ ಇವರಿಗೆ ಸಂದಾಯ ಮಾಡಲು ಏರ್ಪಾಡು ಮಾಡತಕ್ಕದ್ದು.

ಸ್ಥಿರ ಸ್ವತ್ತುಗಳ ವಿವರ

ತುಮಕೂರು ನಗರ, ಶೆಟ್ಟಿಹಳ್ಳಿ ಬಡಾವಣೆ ಖಾತೆ ನಂ.4592/4439 ಚಾಲ್ತಿ ಸಂಖ್ಯೆ:4439 ಆಗಿದ್ದು, ಇದರ ಅಳತೆ: ಪೂರ್ವ-ಪಶ್ಚಿಮ 40 ಅಡಿ, ಉತ್ತರ-ದಕ್ಷಿಣ 20 ಅಡಿ ಆಗಿದ್ದು.

ಇದರ ಚೆಕ್ಕುಬಂದಿ:

ಪೂರ್ವಕ್ಕೆ- ರಸ್ತೆ

ಪಶ್ಚಿಮಕ್ಕೆ- ಕನ್ಸರ್ವೆನ್ಸಿ

ಉತ್ತರಕ್ಕೆ– ಎನ್.ಕೆ. ಜಗನ್ನಾಥ್‌ರವರ ಸ್ವತ್ತು.
ದಕ್ಷಿಣಕ್ಕೆ– ಎನ್.ಕೆ. ಬಾಬುರವರ ಸ್ವತ್ತು, ಈ ಮಧ್ಯೆ ಇರುವ ಸ್ವತ್ತು.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:24.02.2010 ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ತುಮಕೂರು ಉಪವಿಭಾಗ, ತುಮಕೂರು ಇವರ ಕಾರ್ಯವಾಹಿಗಳು
ಕರ್ನಾಟಕ ಸಹಕಾರ ಸಂಘಗಳ ನಿಯಮ, 1960ರ ನಿಯಮ, 38(7) ರನ್ವಯ ನೀಡಿದ ಮಾರಾಟ ದೃಢೀಕರಣ ಪತ್ರ
ಅಮಲ್ಜಾರಿ ಸಂಖ್ಯೆ:63/2003–2004
ಉಪಸ್ಥಿತರು: ಶ್ರೀ ಗೋಪಾಲರೆಡ್ಡಿ, ಕೆ.ಸಿ.ಎಸ್.
ಸಹಕಾರ ಸಂಘಗಳ ಸಹಾಯಕ ನಿಬಂಧಕರು, ತುಮಕೂರು ಉಪವಿಭಾಗ, ತುಮಕೂರು.
ಬಿಡ್‌ದಾರರು: ಶ್ರೀ ರತ್ನರಾಜು ಬಿ.ಎ. ಬಿನ್, ಬಿ.ಪಿ. ಅನಂತರಾಜಪ್ಪ, ತುಮಕೂರು

ಡಿಕ್ರಿ ಹೋಲ್ಡರ್ **ವಿರುದ್ಧ** **ತೀರ್ಪು ಋಣಿ**

ವ್ಯವಸ್ಥಾಪಕರು
ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ.,
ತುಮಕೂರು.

1) ಎಸ್. ಸುಮ ಕೋಂ ಬಿ.ಕೆ. ರಮೇಶ್ ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿ ನಗರ, ತುಮಕೂರು.
2) ಬಿ.ಕೆ. ರಮೇಶ್ ಬಿನ್ ಬಿ.ಆರ್. ಕೆಂಚಪ್ಪ ಶೆಟ್ಟಿಹಳ್ಳಿ ಮುಖ್ಯರಸ್ತೆ, ಮಾರುತಿನಗರ, ತುಮಕೂರು.

ಶ್ರೀ ಪಾರ್ಶ್ವನಾಥ ಸಹಕಾರ ಬ್ಯಾಂಕ್ ನಿ., ತುಮಕೂರು ಇವರು ಸಹಕಾರ ಸಂಘಗಳ ಉಪನಿಬಂಧಕರು ತುಮಕೂರು ಜಿಲ್ಲೆ, ತುಮಕೂರು ಇವರ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ದಾವೆ ನಂ.ಡಿ.ಆರ್.ಟಿ./335/2002–03, ದಿನಾಂಕ:27.01.2003ರ ರೀತ್ಯಾ ಡಿಕ್ರಿ ಪಡೆದಿದ್ದು, ಸದರಿ ಡಿಕ್ರಿಯ ಪ್ರಕಾರ ಅಮಲ್ಜಾರಿ ಅರ್ಜಿ ಹಾಕಿದ್ದು, ಸದರಿ ಅಮಲ್ಜಾರಿ ಅರ್ಜಿ ಸಂಖ್ಯೆ:63/2003–2004, ದಿನಾಂಕ:04.07.2003 ಪ್ರಕಾರ ಅಮಲ್ಜಾರಿ ಪಡೆದು, ಡಿಕ್ರಿಹೋಲ್ಡರ್ ಬ್ಯಾಂಕಿನ ಮಾರಾಟಾಧಿಕಾರಿಯು ಮೇಲ್ಕಂಡ ತೀರ್ಪುಋಣಿದಾರರಾದ ಶ್ರೀಮತಿ ಎಸ್.ಸುಮ ಕೋಂ ಬಿ.ಕೆ. ರಮೇಶ್ ಶೆಟ್ಟಿಹಳ್ಳಿಮುಖ್ಯರಸ್ತೆ, ಮಾರುತಿ ನಗರ, ತುಮಕೂರು ಇವರು ಡಿಕ್ರಿ ಹೋಲ್ಡರ್ ಬ್ಯಾಂಕಿಗೆ ಆಧಾರ ಮಾಡಿದ್ದ, ಈ ಕೆಳಕಂಡ ಸ್ಥಿರಾಸ್ತಿಯನ್ನು ದಿನಾಂಕ:10.10.2009ರಂದು ಬ್ಯಾಂಕಿಗೆ ಬರಬೇಕಾದ ಸುಸ್ತಿ ಸಾಲದ ವಸೂಲಿ ಬಗೆಗೆ ಬಹಿರಂಗ ಹರಾಜು ನಡೆಸಿರುತ್ತಾರೆ.

ಈ ಬಹಿರಂಗ ಹರಾಜಿನಲ್ಲಿ ತೀರ್ಪುಋಣಿಯ ಸ್ಥಿರಸ್ವತ್ತನ್ನು ಶ್ರೀ ರತ್ನರಾಜು ಬಿ.ಎ. ಬಿನ್ ಬಿ.ಪಿ. ಅನಂತರಾಜಪ್ಪ, ತುಮಕೂರು ಇವರು ರೂ.5,50,000=00 (ಐದು ಲಕ್ಷದ ಐವತ್ತು ಸಾವಿರ) ಗಳಿಗೆ ಅತಿ ಹೆಚ್ಚಿನ ಬಿಡ್ ಮೊತ್ತಕ್ಕೆ ಕೊಂಡಿರುತ್ತಾರೆ ಎಂದು ಈ ಮೂಲಕ ದೃಢೀಕರಿಸಿದೆ.

ಆದ್ದರಿಂದ ಈ ಸ್ಥಿರಾಸ್ತಿಯ ಹರಾಜನ್ನು ಬಿಡ್‌ದಾರರಾದ ಶ್ರೀ ರತ್ನರಾಜು ಬಿ.ಎ. ಬಿನ್ ಬಿ.ಪಿ. ಅನಂತರಾಜಪ್ಪ, ತುಮಕೂರು ಇವರು ಹೆಸರಿಗೆ ಸ್ಥಿರೀಕರಣಗೊಳಿಸಿದೆ.

ಸ್ಥಿರಾಸ್ತಿಯ ವಿವರ

ಕ್ರ. ಸಂ.	ತಾಲ್ಲೂಕು	ಸ್ಥಿರ ಸ್ವತ್ತಿನ ವಿವರ/ ತರಹೆ	ಖಾತೆ ನಂಬರ್	ವಿಸ್ತೀರ್ಣ	ಚಕ್ಕುಬಂದಿ
1.	ತುಮಕೂರು ನಗರ, ಶೆಟ್ಟಿಹಳ್ಳಿ, ಬಡಾವಣೆ.	ವಾಸದ ಮನೆ	ಮು.ಖಾ.ನಂ.4592/4439 ಚಾಲ್ತಿ ನಂ.4439	40x20	ಪೂರ್ವಕ್ಕೆ– ರಸ್ತೆ ಪಶ್ಚಿಮಕ್ಕೆ– ಕನ್ಸರ್ವೆನ್ಸಿ ಉತ್ತರಕ್ಕೆ– ಎನ್.ಕೆ. ಜಗನ್ನಾಥ್‌ರವರ ಸ್ವತ್ತು. ದಕ್ಷಿಣಕ್ಕೆ– ಎನ್.ಕೆ. ಬಾಬುರವರ ಸ್ವತ್ತು, ಈ ಮಧ್ಯೆ ಇರುವ ಸ್ವತ್ತು.

ಮಾರಾಟದ ಮೊತ್ತ ರೂ.5,50,000=00
ಮಾರಾಟದ ದಿನಾಂಕ:10.10.2009.

ಈ ಆದೇಶವನ್ನು ನನ್ನ ಸಹಿ ಹಾಗೂ ಕಛೇರಿಯ ಮುದ್ರೆಯೊಂದಿಗೆ ದಿನಾಂಕ:24.02.2010ರಂದು ನೀಡಿದೆ.

ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ತುಮಕೂರು ಉಪವಿಭಾಗ, ತುಮಕೂರು.

ಪಿ.ಆರ್–393

IN THE COURT OF XI ADDL. CHIEF METROPOLITAN MAGISTRATE, BANGALORE CITY

It hereby notified to the public that the Hennur Police Station, Bangalore City have seized the following vehicles as unclaimed and such vehicles are lying in the Police Station as unclaimed so far. Hence the owners of the properties (Vehicles) may put their claim one month from the date of the publication.

Bangalore City
Date

XI Addl. Chief Metropolitan Magistrate
Court, Mayohall, Bangalore City.

Sl. No.	Cr.Misc No.	P.F.No.	Type of Vehicle & Registration No.	Chassis No.	Engine No.
1.	312/07	223/07 Item No.1	Suzuki Samurai KA-03-X-6498	905F314531	71905H363374
2.	312/07	223/07 Item No.2	Suzuki Fiero Not Known	M1006F010704	M1006M011677
3.	30/09	09/09	Yamaha RX 100 KA-04-K-7850	ILI0056384	ILI0056384
4.	35/09	10/09 Item No.2	Kinetic Marvel KA-04-S-6741	PG003332	IEPG003341
5.	35/09	10/09 Item No.8	Hero Honda Splender KA-04-ET-1204	01K20F18559	01K18E16384
6.	169/09	39/09	Bajaj Pulsar KA-16-K-5608	DHVBJK12846	DHGBJK12859
7.	364/09	71/09 Item No.1	Honda Activa KL-08-AH-6790	NE4JF082068218161	JF08E8396985
8.	364/09	71/09 Item No.2	CBZ KA-04-X-3434	000C4SC00037	00B40M05193
9.	365/09	72/09 Item No.1	CD-Dawn KA-03-L-7212	04F27F27887	04F27E31939
10.	365/09	72/09 Item No.2	Bajaj Chetak CKK-8546	06C018730	W06E018896
11.	369/09	74/09 Item No.1	Hero Honda Splender+ AP-02-Q-4342	07A16F05668	07A15E25833

Sl. No.	Cr.Misc No.	P.F.No.	Type of Vehicle & Registration No.	Chassis No.	Engine No.
12.	369/09	74/09 Item No.2	Suzuki Samurai Not Known	1101F286787	1101M293396
13.	374/09	75/09	Maruthi 800 Car KA-02-P-6422	SB308IN532311	F8BIN787187
14.	375/09	76/09 Item No.1	Yamaha Crux KA-01-X-9553	05A5KA464088	05A5A464088
15.	375/09	76/09 Item No.2	Hero Honda Passion KA-03-EN-4800	04F09C095866	04F08M09271
16.	474/09	89/09	Bajaj Discovery KA-07-L-2567/TR/08	M02DSJNZZPCK20115	JNGBPK24563
17.	668/09	89/09 Item No.02	TVS XL KA-03-EK-4974	5291500030	E30CK051047
18.	668/09	89/09 Item No.03	TVS Scooty KA-05-EB-855	Not known	JJ99JM310330
19.	670/09	131/09 Item No.01	Kinetic Marvel KA-03-ED-1677	KIFTE059274	060096KIETE
20.	670/09	131/09 Item No.02	Yamaha RX-100 KA-37-E-5788	ILI396916	ILI396916
21.	674/09	133/09 Item No.01	TVS Champ KA-07-H-5892	713F150380	Not known
22.	674/09	133/09 Item No.02	Yamaha RX-100 KL-09-E-5315	IL5179054	IL5179054

XI Addl. Chief Metropolitan Magistrate
Court, Mayohall, Bangalore City.

PR-448

ಕಂದಾಯ ಇಲಾಖೆ

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಾರ್ಯಾಲಯ, ಮಂಗಳೂರು

ಅಧಿಸೂಚನೆ

ಸಂಖ್ಯೆ: ಸಿಇಎನ್:ಸಿಆರ್:5/09–10 (ಎ–8), ದಿನಾಂಕ:11ನೇ ಮಾರ್ಚ್, 2010

ನಿರ್ದೇಶಕರು, ಜನಗಣತಿ ನಿರ್ದೇಶನಾಲಯ, ಬೆಂಗಳೂರು ಇವರು ತಮ್ಮ ಪತ್ರ ಸಂಖ್ಯೆ: ಸಿ ಅಂಡ್ ಟಿ/7/ಒಆರ್‌ಜಿ/2009 ದಿನಾಂಕ:24.02.2010 ರಲ್ಲಿ ಜನಗಣತಿ ಕಾರ್ಯಗಳಲ್ಲಿ ಮಾಸ್ಟರ್ ಟ್ರೈನರ್, ಸೂಪರ್ ವೈಸರ್, ಮತ್ತು ಗಣತಿದಾರರಾಗಿ ಶಿಕ್ಷಣ ಇಲಾಖಾ ಸಿಬ್ಬಂದಿಯನ್ನು ನೇಮಕ ಮಾಡಲಾಗುವುದರಿಂದ ಶಿಕ್ಷಣ ಇಲಾಖೆಯ ಪಾತ್ರವು ನಿಯೋಜನೆ,

ತರಬೇತಿ, ಜನಗಣತಿ ಕೆಲಸದ ಉಸ್ತುವಾರಿಯಲ್ಲಿ ಬಹು ಮುಖ್ಯವಾಗಿರುವುದನ್ನು ಗಮನಿಸಿ, ಶಿಕ್ಷಣ ಇಲಾಖೆಯ ಉಪ ನಿರ್ದೇಶಕರನ್ನು ಸಹಾಯಕ ಜಿಲ್ಲಾ ಸೆನ್ಸಸ್ ಅಧಿಕಾರಿಯಾಗಿ ನೇಮಕ ಮಾಡಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಅದರಂತೆ, ವಿ. ಪೊನ್ನುರಾಜ್, ಐ.ಎ.ಎಸ್. ಜಿಲ್ಲಾಧಿಕಾರಿ ಹಾಗೂ ಪ್ರಧಾನ ಸೆನ್ಸಸ್ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆಯಾದ ನಾನು ಸೆನ್ಸಸ್ ಅಧಿನಿಯಮ, 1948 ರ ಕಲಂ 4ರ ಉಪ ಕಲಂ(2)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸಹಾಯಕ ಜಿಲ್ಲಾ ಜನಗಣತಿ ಅಧಿಕಾರಿಯಾಗಿ ನೇಮಕ ಮಾಡಿ ಆದೇಶಿಸುತ್ತೇನೆ.

ಮಂಗಳೂರು
ದಿನಾಂಕ:11.03.2010
ಪಿ.ಆರ್-453

ಪ್ರಧಾನ ಜನಗಣತಿ ಅಧಿಕಾರಿ ಮತ್ತು ಜಿಲ್ಲಾಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಕರ್ನಾಟಕ ರಾಜ್ಯ ಚುನಾವಣಾ ಆಯೋಗದ ನಡವಳಿಗಳು

ವಿಷಯ: ಶ್ರೀ ಕೆ. ಕೃಷ್ಣ ಬಿನ್ ಲೇ: ಕಾಳೇಗೌಡ ರವರು ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು ಪಂಚಾಯತಿ ಉಪ ಚುನಾವಣೆ-2008ರಲ್ಲಿ ಚಿಕ್ಕಮುಲಗೂಡು ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರದಿಂದ ಸ್ಪರ್ಧಿಸಿ ಚುನಾವಣಾ ವೆಚ್ಚದ ಲೆಕ್ಕ ವಿವರಗಳನ್ನು ಸಲ್ಲಿಸದಿರುವುದರಿಂದ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-ಸಿ ಪ್ರಕಾರ ಅನರ್ಹಗೊಳಿಸುವ ಬಗ್ಗೆ.

ಉಲ್ಲೇಖ:1) ಜಿಲ್ಲಾಧಿಕಾರಿಗಳು, ಮಂಡ್ಯ ಜಿಲ್ಲೆ ರವರ ಪತ್ರ ಸಂಖ್ಯೆ: ಇಎಲ್ಎನ್ (2)145/2008-09, ದಿನಾಂಕ:09.03.2009.

2) ಆಯೋಗದ ನೋಟೀಸು ಸಂಖ್ಯೆ: ರಾಚುಆ/05/ಟಿಜೆಡ್‌ಪಿ/2008(ಪಿ), ದಿನಾಂಕ:30.03.2009.

3) ಜಿಲ್ಲಾಧಿಕಾರಿಗಳು ಮಂಡ್ಯ ಜಿಲ್ಲೆ ರವರ ಪತ್ರ ಸಂಖ್ಯೆ: ಇಎಲ್ಎನ್(2)1/ 2009-10, ದಿನಾಂಕ:29.12.2009.

ಪ್ರಸ್ತಾವನೆ:

ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು ಪಂಚಾಯತಿ ಸದಸ್ಯ ಸ್ಥಾನಕ್ಕೆ ಚಿಕ್ಕಮುಲಗೂಡು ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರದಿಂದ ಉಪ ಚುನಾವಣೆ 2008ರಲ್ಲಿ ಸ್ಪರ್ಧಿಸಿದ್ದ (ಪ್ರಪತ್ರ-10ರಂತೆ) ಶ್ರೀ ಕೆ.ಕೃಷ್ಣ ಬಿನ್ ಲೇ: ಕಾಳೇಗೌಡ ರವರು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-ಬಿ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚ ಮಿತಿ) ನಿಯಮಗಳು 2005ರ ನಿಯಮ 2 ಮತ್ತು ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚ ಮಿತಿ) ಆದೇಶ 2005ರ ಖಂಡ 3 ರ ಪ್ರಕಾರ, ಚುನಾವಣಾ ವೆಚ್ಚಗಳ ಲೆಕ್ಕ ಪತ್ರವನ್ನು ನಿಗದಿತ ನಮೂನೆಯಲ್ಲಿ ಚುನಾವಣಾ ಫಲಿತಾಂಶ ಘೋಷಿತವಾದ 30 ದಿನಗಳೊಳಗೆ ಸಲ್ಲಿಸಿರುವುದಿಲ್ಲವೆಂದು ಮಂಡ್ಯ ಜಿಲ್ಲೆಯ ಜಿಲ್ಲಾಧಿಕಾರಿಗಳು ಉಲ್ಲೇಖ (1)ರ ಪತ್ರದಲ್ಲಿ ವರದಿ ಮಾಡಿರುತ್ತಾರೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-ಸಿ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚ ಮಿತಿ) ಆದೇಶ 2005ರ ಖಂಡ 6ರ ಉಪಖಂಡ 5ರನ್ವಯ ಆಯೋಗದಿಂದ ಉಲ್ಲೇಖ (2)ರಂತೆ ದಿನಾಂಕ:30.03.2009ರ ನೋಟೀಸನ್ನು ಅಭ್ಯರ್ಥಿಗೆ ನೀಡಿ ಅವರನ್ನು ಏಕೆ ಅನರ್ಹಗೊಳಿಸಬಾರದು ಎಂಬುದಕ್ಕೆ ನೋಟೀಸು ತಲುಪಿದ 20 ದಿನಗಳೊಳಗಾಗಿ ರಾಜ್ಯ ಚುನಾವಣಾ ಆಯೋಗಕ್ಕೆ ಕಾರಣಗಳನ್ನು ಸಲ್ಲಿಸತಕ್ಕದೆಂದು ತಿಳಿಸಲಾಗಿತ್ತು.

ಮೇಲ್ಕಂಡ ನೋಟೀಸನ್ನು ಜಾರಿ ಮಾಡಿಸಿ ಜಿಲ್ಲಾಧಿಕಾರಿಗಳು ಜಾರಿಯಾದ ಪ್ರತಿಯನ್ನು ಆಯೋಗಕ್ಕೆ ಕಳುಹಿಸಿರುತ್ತಾರೆ. ಆದಾಗ್ಯೂ ಅಭ್ಯರ್ಥಿಯು ಆಯೋಗಕ್ಕೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಹಾಗೂ ಉಲ್ಲೇಖ (3)ರ ಜಿಲ್ಲಾಧಿಕಾರಿಗಳ ವರದಿಗಳಲ್ಲಿಯೂ ಸಹ ಸದರಿ ಅಭ್ಯರ್ಥಿಯು ಚುನಾವಣಾ ವೆಚ್ಚದ ಲೆಕ್ಕ ವಿವರಗಳನ್ನು ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಅಭ್ಯರ್ಥಿಯು ಚುನಾವಣಾ ವೆಚ್ಚದ ಲೆಕ್ಕ ಪತ್ರಗಳನ್ನು ಸಲ್ಲಿಸದೇ ಇರುವುದಕ್ಕೆ ಸರಿಯಾದ ಕಾರಣ ಅಥವಾ ಸಮರ್ಥನೆಗಳು ಇರುವುದಿಲ್ಲವೆಂದು ದೃಢಪಟ್ಟಿರುತ್ತದೆ. ಕಾರಣ ಈ ಕೆಳಕಂಡಂತೆ ಆದೇಶ.

ಆದೇಶ ಸಂಖ್ಯೆ: ರಾಚುಆ/02/ಟಿಜಡ್‌ಪಿ/2010, ಬೆಂಗಳೂರು, ದಿನಾಂಕ:23ನೇ ಮಾರ್ಚ್, 2010

ಮೇಲೆ ವಿವರಿಸಿರುವಂತೆ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು ಪಂಚಾಯತಿ ಸದಸ್ಯ ಸ್ಥಾನಕ್ಕೆ ಚಿಕ್ಕಮುಲಗೂಡು ತಾಲ್ಲೂಕು ಪಂಚಾಯತಿ ಚುನಾವಣಾ ಕ್ಷೇತ್ರದಿಂದ ಉಪ ಚುನಾವಣೆ 2008ರಲ್ಲಿ ಸ್ಪರ್ಧಿಸಿದ್ದ ಶ್ರೀ ಕೆ. ಕೃಷ್ಣ ಬಿನ್ ಲೇ: ಕಾಳೇಗೌಡ ಇವರು, ಚುನಾವಣಾ ವೆಚ್ಚದ ಲೆಕ್ಕ ಪತ್ರಗಳನ್ನು ಸಲ್ಲಿಸದೇ ಇರುವುದಕ್ಕೆ ಸರಿಯಾದ ಕಾರಣ ಅಥವಾ ಸಮರ್ಥನೆ ಇಲ್ಲವೆಂದು ದೃಢಪಟ್ಟಿರುವುದರಿಂದ ರಾಜ್ಯ ಚುನಾವಣಾ ಆಯೋಗವು ಅವರನ್ನು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 308–ಸಿ ಅನುಸಾರ ಈ ಆದೇಶದ ದಿನಾಂಕದಿಂದ ಆರು ವರ್ಷಗಳ ಅವಧಿಗೆ ಅನರ್ಹರೆಂದು ಘೋಷಿಸಿರುತ್ತದೆ.

ಆಯುಕ್ತರು,
ರಾಜ್ಯ ಚುನಾವಣಾ ಆಯೋಗ.

ಪಿ.ಆರ್–449

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:405/2008–09, ದಿನಾಂಕ:24ನೇ ಸೆಪ್ಟೆಂಬರ್, 2009

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಅಬಕಾರಿ ಉಪ ನಿರೀಕ್ಷಕರು, ನಂಜನಗೂಡು ವಲಯ.		ಸಿದ್ದಪ್ಪ ಬಿನ್ ಲೇಟ್ ಮಲ್ಲಯ್ಯ ದೇವರಸನಹಳ್ಳಿ ಗ್ರಾಮ, ನಂಜನಗೂಡು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ: 16.02.2009ರಂದು ಸಂಜೆ 4.30 ಗಂಟೆ ಸಮಯದಲ್ಲಿ ಅಬಕಾರಿ ಉಪ ನಿರೀಕ್ಷಕರು, ನಂಜನಗೂಡು ವಲಯ ಇವರು ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ದೇವರಸನಹಳ್ಳಿ ಗ್ರಾಮದ ಹತ್ತಿರ, ಕೆಎ–05/ಇಎಫ್–2462 ನೋಂದಣಿ ಸಂಖ್ಯೆಯ ಟಿ.ವಿ.ಎಸ್. ಎಕ್ಸೆಲ್ ವಾಹನದಲ್ಲಿ ಅಕ್ರಮವಾಗಿ 40 ಲೀ. ಸೇಂದಿಯನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಸೇಂದಿಯನ್ನು ಜಪ್ತುಪಡಿಸಿ, ಪ್ರಥಮ ಮಾಹಿತಿ ವರದಿ ಸಂಖ್ಯೆ:01/2008–09 ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 13(ಎ) (ಸಿ), 14, 15ರ ರೀತ್ಯಾ, ಕರ್ನಾಟಕ ಅಬಕಾರಿ (ಮರಗಳ ಉತಾರು ಮಾಡುವುದು) ನಿಯಮ 1991ರ ಕಲಂ 22, 23ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 38(ಎ) ಮತ್ತು 43ರ ರೀತ್ಯಾ ಶಿಕ್ಷಾರ್ಹವಾದ್ದರಿಂದ ಸಿದ್ದಪ್ಪ ಬಿನ್ ಲೇಟ್ ಮಲ್ಲಯ್ಯ ಎಂಬ ಆರೋಪಿಯನ್ನು ದಸ್ತಗಿರಿ ಮಾಡಿ, ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ಮೊಕದ್ದಮೆ ದಾಖಲಿಸಿ, ಪ್ರಥಮ ಮಾಹಿತಿ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣದಲ್ಲಿ ಮಾದರಿ ತೆಗೆಯಲಾದ ಮಾದಕ ದ್ರವ್ಯಗಳನ್ನು ಬೆಂಗಳೂರು ಕೇಂದ್ರ ರಾಸಾಯನಿಕ ಪ್ರಯೋಗಾಲಯಕ್ಕೆ ಒಳಪಡಿಸಿ, ವರದಿ ಪಡೆಯಲಾಗಿ ಈಥೈಲ್ ಆಲ್ಕೋಹಾಲ್ ಅಂಶ ಪತ್ತೆಯಾಗಿದ್ದು, ಅವು ಮಾನವನ ಸೇವನೆಗೆ ಯೋಗ್ಯವಾಗಿರುತ್ತವೆಂದು ದಿನಾಂಕ:22.05.2009ರ ರಾಸಾಯನಿಕ ತಜ್ಞರ ವರದಿಯಲ್ಲಿ ದೃಢಪಟ್ಟಿರುತ್ತದೆ.

ವಶಪಡಿಸಿಕೊಂಡ ವಾಹನಗಳ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯ ಪ್ರತಿಯನ್ನು ಕೋರಿ, ಬೆಂಗಳೂರು ದಕ್ಷಿಣ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:25.03.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಅಂತೆಯೇ ದಿನಾಂಕ:25.05.2009ರಂದು 'ಬಿ' ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಅದನ್ನು ಪರಿಶೀಲಿಸಲಾಗಿ ಶ್ರೀಮತಿ ಎಸ್. ಕಾತ್ಯಾಯಿನಿ ಕೋಂ ಜಯಸಿಂಹ ಎಸ್. ಸಂ.597/21, 3ನೇ ಕ್ರಾಸ್, 5ನೇ ಮೈನ್, ಗೋಪಾಲಕೃಷ್ಣ ಅಡಿಗ ರಸ್ತೆ, ಹನುಮಂತನಗರ, ಬೆಂಗಳೂರು ಇವರ ಒಡೆತನದಲ್ಲಿರುವುದು ಕಂಡುಬಂದಿರುತ್ತದೆ. ಶ್ರೀಮತಿ ಕಾತ್ಯಾಯಿನಿ ಮತ್ತು ಶ್ರೀ ಸಿದ್ದಪ್ಪ ಬಿನ್ ಲೇಟ್ ಮಲ್ಲಯ್ಯ ಇವರಿಗೆ ಸದರಿಯವರಿಗೆ ಈ ಪ್ರಾಧಿಕಾರದಿಂದ ದಿನಾಂಕ:12.03.2009 ಮತ್ತು 28.05.2009 ರಂದು ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದು, ಸದರಿ ನೋಟೀಸ್ 15.06.2009ರಂದು ಜಾರಿಯಾಗಿ ಸ್ವೀಕೃತಿ ಈ ಪ್ರಾಧಿಕಾರಕ್ಕೆ ಸ್ವೀಕೃತಗೊಂಡಿರುತ್ತದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:16.02.2009ರಂದು ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ದೇವರಸನಹಳ್ಳಿ ಗ್ರಾಮದ ಹತ್ತಿರ, ಕೆಎ–05/ಇಎಫ್–2462 ನೋಂದಣಿ ಸಂಖ್ಯೆಯ ಟಿ.ವಿ.ಎಸ್. ಎಕ್ಸೆಲ್ ವಾಹನದಲ್ಲಿ ಅಕ್ರಮವಾಗಿ 40 ಲೀ. ಸೇಂದಿಯನ್ನು ಹೊಂದಿ ಸಾಗಾಣಿಕೆ ಮಾಡುತ್ತಿದ್ದದ್ದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 38(ಎ) 43ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು ಹಾಗೂ ವಾಹನ ಮಾಲೀಕರಾದ ಶ್ರೀಮತಿ ಕಾತ್ಯಾಯಿನಿ ರವರಿಗೆ ಕಲಂ 43(ಬಿ)ರ ಅಡಿಯಲ್ಲಿ ನೋಟೀಸ್ ನೀಡಲಾಗಿದ್ದರೂ ಸಹ ಈ ಬಗ್ಗೆ

ಪ್ರತಿವಾದಿಗಳು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಸ್ಪಷ್ಟವಾಗಿ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯ ವಾಹನ ಮಾಲೀಕನ ತಿಳುವಳಿಕೆಯಲ್ಲೇ ನಡೆದಿದೆ ಎಂಬುವುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (7) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೇ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್:405/2008–09, ದಿನಾಂಕ:24ನೇ ಸೆಪ್ಟೆಂಬರ್, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಅಬ್ಕಾರಿ ನಿರೀಕ್ಷಕರು, ನಂಜನಗೂಡು ವಲಯ ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:01/2008–09, ದಿನಾಂಕ:16.02.2009ರಂದು ವಶಪಡಿಸಿಕೊಂಡ ಕೆಎ–05/ಇಎಫ್–2462 ನೋಂದಣಿ ಸಂಖ್ಯೆಯ ಟಿ.ವಿ.ಎಸ್.ಎಕ್ಸೆಲ್ ವಾಹನವನ್ನು (40 ಲೀ. ಸೇಂದಿಯನ್ನು ಮಾದರಿಯನ್ನು ಹೊರತುಪಡಿಸಿ, ಈಗಾಗಲೇ ಪ್ರತ್ಯೇಕ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಸೆಪ್ಟೆಂಬರ್ ತಿಂಗಳ 24ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್–1227

ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರ ನ್ಯಾಯಾಲಯ

ಸಂಖ್ಯೆ: ಡಿಟಿಸಿಆರ್:435(ಪೊಲೀಸ್)/2008–09, ದಿನಾಂಕ:24ನೇ ಸೆಪ್ಟೆಂಬರ್, 2009

ಉಪಸ್ಥಿತರು: ಡಾ॥ ವೈ. ಮಂಜುನಾಥ್,
ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ಹಾಗೂ ಅಧಿಕೃತ ಅಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

ಪಿರ್ಯಾದುದಾರರು	**ವಿರುದ್ಧ**	**ಪ್ರತಿವಾದಿ/ ಆರೋಪಿ**
ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ, ನಂಜನಗೂಡು ತಾ:		ಚಂದ್ರ ಮತ್ತು ಇತರರು, ನಂಜನಗೂಡು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:05.02.2009ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ ಇವರು ನಂಜನಗೂಡು ತಾಲ್ಲೂಕು, ನಂಜನಗೂಡು–ಗುಂಡ್ಲುಪೇಟೆ ರಸ್ತೆ, ವಡ್ಡರಪಾಳ್ಯ ಗೇಟ್ ಬಳಿ ಕೆಎ–02/ಯು–3015 ನೋಂದಣಿ ಸಂಖ್ಯೆಯ ಸುಜುಕಿ ಸಮುರಾಯ್ ವಾಹನದಲ್ಲಿ ಅಕ್ರಮವಾಗಿ 5.400 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದ ಆರೋಪಕ್ಕಾಗಿ ವಾಹನ ಮತ್ತು ಮದ್ಯವನ್ನು ಜಪ್ತುಗೊಳಿಸಿ, ಚಂದನ್ ಮತ್ತು ಬಸವನಾಯ್ಕ ಬಿನ್ ಎಂಬುವವರನ್ನು ದಸ್ತಗಿರಿ ಮಾಡಿ ಪ್ರಥಮ ಮಾಹಿತಿ ವರದಿ ಸಂಖ್ಯೆ:35/2009ರಲ್ಲಿ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11, 14, 32, 34ರ ರೀತ್ಯಾ ಮೊಕದ್ದಮೆ ದಾಖಲಿಸಿ, ಜಪ್ತುಪಡಿಸಲಾದ ವಾಹನ ಮತ್ತು ಮದ್ಯವನ್ನು

ಮುಂದಿನ ಕ್ರಮಕ್ಕೆ ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ದಿನಾಂಕ:15.02.2009ರಂದು ಈ ಪ್ರಾಧಿಕಾರದ ಅನುಮತಿಗಾಗಿ ಕೋರಿರುತ್ತಾರೆ. ಅಂತೆಯೇ ದಿನಾಂಕ:19.02.2009ರಂದು ನಂಜನಗೂಡು ವಲಯದ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಲು ಅನುಮತಿ ನೀಡಲಾಗಿರುತ್ತದೆ.

ವಶಪಡಿಸಿಕೊಂಡ ವಾಹನಗಳ ಮಾಲೀಕತ್ವದ ವಿವರವುಳ್ಳ 'ಬಿ' ವಹಿಯನ್ನು ಕೋರಿ, ಬೆಂಗಳೂರಿನ ಪಶ್ಚಿಮ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಗೆ ದಿನಾಂಕ:18.03.2009ರಂದು ಈ ಪ್ರಾಧಿಕಾರದಿಂದ ಪತ್ರ ಬರೆಯಲಾಗಿರುತ್ತದೆ. ಅಂತೆಯೇ ದಿನಾಂಕ:06.04.2009ರಂದು 'ಬಿ' ವಹಿಯ ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಅದನ್ನು ಪರಿಶೀಲಿಸಲಾಗಿ ರವಿಶಂಕರ್ ಬಿ. ಬಿನ್ ದೊಡ್ಡಸ್ವಾಮಿಗೌಡ, ಸಂ.8, ಸುಬ್ಬಣ್ಣ ಗಾರ್ಡನ್, ವಿಜಯನಗರ, ಬೆಂಗಳೂರು ಇವರ ಒಡೆತನದಲ್ಲಿರುವುದು ಕಂಡು ಬಂದಿರುತ್ತದೆ. ಸದರಿಯವರಿಗೆ ಈ ಪ್ರಾಧಿಕಾರದಿಂದ ದಿನಾಂಕ:14.05.2009ರಂದು ಕಲಂ 43(ಬಿ) ರ ಅಡಿಯಲ್ಲಿ ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದು ಸದರಿ ನೋಟೀಸ್ 06.06.2009ರಂದು ಜಾರಿಯಾಗಿ ಸ್ವೀಕೃತಿಯು ಈ ಪ್ರಾಧಿಕಾರಕ್ಕೆ ಸ್ವೀಕೃತಗೊಂಡಿರುತ್ತದೆ.

ಲಭ್ಯವಿರುವ ದಾಖಲೆಗಳಂತೆ, ದಿನಾಂಕ:05.02.2009ರಂದು ನಂಜನಗೂಡು ತಾಲ್ಲೂಕು, ನಂಜನಗೂಡು–ಗುಂಡ್ಲುಪೇಟೆ ರಸ್ತೆ, ವಡ್ಡರಪಾಳ್ಯ ಗೇಟ್ ಬಳಿ ಕೆಎ–02/ಯು–3015 ನೋಂದಣಿ ಸಂಖ್ಯೆಯ ಸುಜುಕಿ ಸಮುರಾಯ್ ವಾಹನದಲ್ಲಿ ಅಕ್ರಮವಾಗಿ 5.400 ಲೀ. ಮದ್ಯವನ್ನು ಹೊಂದಿ, ಸಾಗಾಣಿಕೆ ಮಾಡುತ್ತಿದ್ದುದು ಕಂಡುಬಂದಿರುತ್ತದೆ. ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಕಲಂ 32, 34ರ ಅಡಿಯಲ್ಲಿ ತನಿಖಾಧಿಕಾರಿಗಳು ಆರೋಪ ಮಾಡಿದ್ದು, ಪ್ರತಿವಾದಿಯು ತನ್ನ ಮೇಲೆ ಇರತಕ್ಕಂತಹ ಜವಾಬ್ದಾರಿಯನ್ನು ಇದೂವರೆವಿಗೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ನಿರೂಪಿಸಿರುವುದಿಲ್ಲ. ಆದ ಕಾರಣ ಈ ಕೃತ್ಯವು ವಾಹನ ಮಾಲೀಕನ ತಿಳುವಳಿಕೆಯಲ್ಲೇ ನಡೆದಿದೆ ಎಂಬುವುದು ಈ ಪ್ರಾಧಿಕಾರಕ್ಕೆ ಮನವರಿಕೆಯಾಗಿರುತ್ತದೆ.

ಈ ಪ್ರಕರಣ ದಾಖಲಾಗಿ ಈಗಾಗಲೇ ಸುಮಾರು (7) ತಿಂಗಳಿಗೂ ಹೆಚ್ಚು ಕಾಲ ಕಳೆದರೂ ಸಹ ಜಪ್ತಿಯಾದ ವಾಹನವು ತನ್ನದೆಂದಾಗಲೀ, ಈ ಬಗ್ಗೆ ತಾನು ವಿಚಾರಣೆ ನಡೆಸುತ್ತೇನೆ ಎಂದಾಗಲೀ ಯಾರೊಬ್ಬರೂ ಇಂದಿನವರೆವಿಗೂ ಖುದ್ದಾಗಿಯಾಗಲೀ, ಅಥವಾ ತನ್ನ ವಕೀಲರ ಮೂಲಕವಾಗಲೀ ಅರ್ಜಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರಿಗೆ ಸಾಕಷ್ಟು ದಿನಗಳ ಕಾಲಾವಕಾಶವನ್ನು ನೀಡಿದಾಗಲೂ ಸಹ ಇವರು ಈ ಪ್ರಾಧಿಕಾರದಲ್ಲಿ ತನ್ನ ಹಕ್ಕನ್ನು ಸ್ಥಾಪಿಸದೇ ಇರುವುದರಿಂದ ಸದರಿಯವರು ತನ್ನ ಮೇಲೆ ಹೊರಿಸಿರುವ ಆರೋಪವನ್ನು ಆಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆ. ಅಲ್ಲದೇ ಈ ಘಟನೆಯು ಸಂಭವಿಸಿದ ದಿನದಂದು ವಾಹನವು ಯಾರ ವಶದಲ್ಲಿತ್ತೋ ಅವರಿಗೆ ಅಥವಾ ವಾಹನ ಮಾಲೀಕರಿಗೆ/ಏಜೆಂಟರ್ ಗಮನಕ್ಕೆ ಬಾರದೇ ಮತ್ತು ಅವರುಗಳು ಶಾಮೀಲಾಗದೆ ಹಾಗೂ ಅವರೆಲ್ಲರಿಗೂ ಅರಿವಿಲ್ಲದೇ ಈ ಘಟನೆ ನಡೆದಿದೆ ಎಂಬುದನ್ನು ತೃಪ್ತಿಕರವಾಗಿ ಈ ಪ್ರಾಧಿಕಾರದಲ್ಲಿ ನಿರೂಪಿಸಿಲ್ಲವಾದ್ದರಿಂದ ಸದರಿ ವಾಹನವನ್ನು ಇನ್ನೂ ಹಾಗೇ ಇಟ್ಟುಕೊಂಡಲ್ಲಿ ಯಾವುದೇ ಪ್ರಯೋಜನ ಇರದಿರುವುದನ್ನು ಮನಗಂಡು ಅದನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದು ಸೂಕ್ತವೆಂದು ಕಂಡುಬಂದಿರುತ್ತದೆ. ಆದ್ದರಿಂದ ಈ ಕೆಳಕಂಡ ಆದೇಶ.

ಆದೇಶ ಸಂಖ್ಯೆ: ಡಿಟಿಸಿಆರ್:435/2008–09, ದಿನಾಂಕ:24ನೇ ಸೆಪ್ಟೆಂಬರ್, 2009

ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 43(ಎ) (2)ರನ್ವಯ ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಆರಕ್ಷಕ ಉಪ ನಿರೀಕ್ಷಕರು, ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ, ಇವರು ಹೂಡಲಾದ ಪ್ರ.ಮಾ.ವರದಿ ಸಂಖ್ಯೆ:35/2009, ದಿನಾಂಕ:05.02.2009ರಂದು ವಶಪಡಿಸಿಕೊಂಡ ಕೆಎ–02/ಯು–3015 ನೋಂದಣಿ ಸಂಖ್ಯೆಯ ಸುಜುಕಿ ಸಮುರಾಯ್ ವಾಹನವನ್ನು (5.400 ಲೀ. ಮದ್ಯವನ್ನು ಮಾದರಿಯನ್ನು ಹೊರತುಪಡಿಸಿ, ಈಗಾಗಲೇ ಪ್ರತ್ಯೇಕ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ) ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಿದೆ.

(ಈ ಆದೇಶವನ್ನು ಇಂದು ಅಂದರೆ 2009ನೇ ಇಸವಿ ಸೆಪ್ಟೆಂಬರ್ ತಿಂಗಳ 24ನೇ ತಾರೀಖಿನಂದು ವಿಷಯ ನಿರ್ವಾಹಕರಿಗೆ ಉಕ್ತಲೇಖನ ನೀಡಿ, ನಂತರ ಗಣಕೀಕೃತಗೊಳಿಸಿ, ತಪ್ಪುಗಳನ್ನು ತಿದ್ದಿ, ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಈ ಆದೇಶವು ಇಂದಿನಿಂದ 30 ದಿನಗಳ ನಂತರ ಜಾರಿಗೆ ಬರುವುದು.

ಡಾ॥ ವೈ. ಮಂಜುನಾಥ್
ಡೆಪ್ಯೂಟಿ ಕಮೀಷನರ್ ಎಕ್ಸೈಜ್
ಹಾಗೂ ಅಧಿಕೃತ ಅಧಿಕಾರಿಗಳು,
ಮೈಸೂರು ಜಿಲ್ಲೆ, ಮೈಸೂರು.

ಪಿ.ಆರ್–1213

ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು

ಭೂ ಸ್ವಾಧೀನ ಕಾಯ್ದೆ ಕಲಂ 4(1) ಅಧಿಸೂಚನೆ

ಕ್ರಮಾಂಕ ಭೂ ಕಗೃಮಂ/ಭೂ.ಸ್ವಾ.ವಿ/130/09–10, ದಿನಾಂಕ:24ನೇ ಮಾರ್ಚ್, 2010

ಈ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಗೃಹ ಮಂಡಳಿಯ ಯೋಜನೆಗೆ ಬೇಕಾಗುವುದೆಂದು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ರವರಿಗೆ ಕಂಡುಬಂದಿದೆ.

1991ನೇ ಸಾಲಿನ ಕರ್ನಾಟಕ ಭೂಸ್ವಾಧೀನ ಅಧಿನಿಯಮ 33ರಲ್ಲಿ ತಿದ್ದುಪಡಿಯಾದ 1894 ನೇ ಸಾಲಿನ ಭೂಸ್ವಾಧೀನ ಅಧಿನಿಯಮ 4(2)ನೆಯ ಪ್ರಕರಣದಲ್ಲಿ ವಿಹಿತವಾದ ಅಧಿಕಾರವನ್ನು ಉಪಯೋಗಿಸಲು ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ಇವರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಅಧಿಕಾರ ನೀಡಿರುತ್ತದೆ.

ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಯಾವೊಬ್ಬ ವ್ಯಕ್ತಿಯೂ ಭೂಸ್ವಾಧೀನದ ಬಗ್ಗೆ ಆಕ್ಷೇಪಣೆಗಳನ್ನು ಮಾಡುವುದಿದ್ದಲ್ಲಿ, ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಕಟಗೊಂಡ ತಾರೀಖಿನಿಂದ 30 ದಿನಗಳೊಳಗಾಗಿ 1991ನೇ ಇಸವಿ ಕರ್ನಾಟಕ ಭೂಸ್ವಾಧೀನ ಅಧಿನಿಯಮ ಕಾಯ್ದೆ 33ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣ ಅಧಿನಿಯಮದ 3(ಸಿ)ರ ಪ್ರಕರಣದ ಮೇರೆಗೆ ಗೃಹ ಆಯುಕ್ತರು ಪ್ರಶಾಸನ ಕಾರ್ಯಗಳನ್ನು ನಿರ್ವಹಿಸಲು, ನೇಮಕ ಮಾಡಲಾದ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರುರವರಿಗೆ ಲಿಖಿತ ಮೂಲಕ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಯಾವೊಬ್ಬ ಮೋಜಣಿದಾರರು ಅಥವಾ ಬೇರೆ ಯಾವುದೇ ಅಧಿಕಾರಿಗೆ ಅಡಚಣೆಯನ್ನುಂಟು ಮಾಡುವುದಾಗಲೀ ಅಥವಾ ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಸದರಿ ಜಮೀನಿನಲ್ಲಿ ಆಸಕ್ತಿಯುಳ್ಳ ಎಲ್ಲರಿಗೂ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರಿ ಜಮೀನಿನ ವಿಲೇವಾರಿಗಾಗಿ ಮಾರಾಟ ಗುತ್ತಿಗೆ, ಅಡಮಾನ, ಹಸ್ತಾಂತರ, ವಿನಿಮಯ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚ ಯಾ ಅಭಿವೃದ್ಧಿಗಳನ್ನು ಈ ಅಧಿಸೂಚನೆ ಪ್ರಕಟವಾದ ನಂತರ ಗೃಹ ಆಯುಕ್ತರವರ ಮಂಜೂರಾತಿಯನ್ನು ಪಡೆಯದೆ ಮಾಡಿದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಸಂಗ್ರಹಣ ಮಾಡಲಾಗುವ ಸದರಿ ಜಮೀನಿನ ಅಂತಹ ಭೂ ಪರಭಾರೆಯ ಪರಿಹಾರವನ್ನು ನಿರ್ಧರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮ 24ನೇ ಪ್ರಕರಣ ಮೇರೆಗೆ ಉಪೇಕ್ಷಿಸಲಾಗುವುದು.

ಸದರಿ ಜಮೀನಿನ ಒಂದು ನಕ್ಷೆಯನ್ನು ವಿಶೇಷ ಭೂಸ್ವಾಧೀನ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

ಪರಿಶಿಷ್ಟ

ಜಿಲ್ಲೆ: ಮೈಸೂರು   ತಾಲ್ಲೂಕು: ಪಿರಿಯಾಪಟ್ಟಣ   ಹೋಬಳಿ: ಹಾರನಹಳ್ಳಿ   ಗ್ರಾಮ: ಕೊಪ್ಪ

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಒಟ್ಟು ವಿಸ್ತೀರ್ಣ	ಆಕಾರ ರೂ. ಪೈ.
					ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.		
1	2	3	4	5	6	7	8	9	10	11
1.	ಎಂ.ಪಿ. ಮುತ್ತಣ್ಣ	ಎಂ.ಪಿ. ಮುತ್ತಣ್ಣ	29	ಖುಷ್ಕಿ	30	28	27	32	6–13	10.57
	ಕೆ. ನಿರ್ಮಲ ಕುಶಾಲಪ್ಪ ಕೋಂ ಕೆ.ಸಿ. ಕುಶಾಲಪ್ಪ	ಕೆ.ನಿರ್ಮಲ ಕುಶಾಲಪ್ಪ ಕೋಂ ಕೆ.ಸಿ. ಕುಶಾಲಪ್ಪ							0–05 6–18	

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಒಟ್ಟು ವಿಸ್ತೀರ್ಣ	ಆಕಾರ ರೂ. ಪೈ.
					ಪೂರ್ವ ಸ.ನಂ.	ಪಶ್ಚಿಮ ಸ.ನಂ.	ಉತ್ತರ ಸ.ನಂ.	ದಕ್ಷಿಣ ಸ.ನಂ.		
1	**2**	**3**	**4**	**5**	**6**	**7**	**8**	**9**	**10**	**11**
2.	ಎಂ.ಪಿ. ಮುತ್ತಣ್ಣ	ಎಂ.ಪಿ. ಮುತ್ತಣ್ಣ	31/1	ಖುಷ್ಕಿ	30	29	30	32	4–26	7.43
3.	ಎಂ.ಪಿ. ಬೋಪಯ್ಯ	ಎಂ.ಪಿ. ಬೋಪಯ್ಯ	31/2	ಖುಷ್ಕಿ	30	31/1	30	33	3–09	5.23
4.	ಎಂ.ಪಿ. ಮುತ್ತಣ್ಣ	ಎಂ.ಪಿ. ಮುತ್ತಣ್ಣ	32/1	ಖುಷ್ಕಿ	31	28	29	41	7–37	12.08
5.	ವಾಣಿ ಬೋಪಯ್ಯ ಕೋಂ ಎಂ.ಪಿ. ಬೋಪಯ್ಯ	ವಾಣಿ ಬೋಪಯ್ಯ	32/2	ಖುಷ್ಕಿ	33	32/1	31	41	4–02	6.12
6.	ವಾಣಿ ಬೋಪಯ್ಯ ಕೋಂ ಎಂ.ಪಿ.ಬೋಪಯ್ಯ	ವಾಣಿ ಬೋಪಯ್ಯ	33/1	ಖುಷ್ಕಿ	ಊರಗಡಿ	32	31, 30	ರಸ್ತೆ	6–20	11.10
7.	ವಾಣಿ ಬೋಪಯ್ಯ ಕೋಂ ಎಂ.ಪಿ.ಬೋಪಯ್ಯ	ವಾಣಿ ಬೋಪಯ್ಯ	33/2	ಖುಷ್ಕಿ	ಊರಗಡಿ	32	31,30	ರಸ್ತೆ	1–20	2.65
8.	ಎಂ.ಪಿ. ಮುತ್ತಣ್ಣ	ಎಂ.ಪಿ. ಮುತ್ತಣ್ಣ	41	ಖುಷ್ಕಿ	32	42	32	ರಸ್ತೆ	0–36	1.29

ಫೋಪ್ವಾರೆ
ಗ್ರಾಮ: ಕೊಪ್ಪ

ತರಹೆ	ವಿಸ್ತೀರ್ಣ ಎ–ಗುಂ
ಖುಷ್ಕಿ	35–08
ಖರಾಬ್	– –
ಒಟ್ಟು	**35–08**

ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ಪಿ.ಡಿ.57